Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka High Court

## Previous Year Paper
### (Prelims) District Judge
### 09 Jan 2021

Teachingninja.in

**A**

# HIGH COURT OF KARNATAKA

## PRELIMINARY EXAMINATION FOR THE POST OF DISTRICT JUDGES

Time: 3.00 PM to 4.30 PM
ಸಮಯ: ಮಧ್ಯಾಹ್ನ 3.00 ರಿಂದ ಸಂಜೆ 4.30 ಗಂಟೆ

Marks – 100
ಅಂಕಗಳು – 100

Date: 09th January 2021
ದಿನಾಂಕ: 09ನೇ ಜನವರಿ 2021

**Note:**

***If there is any discrepancy in the question in English language and Kannada language, the questions as framed in English language shall prevail.***

*ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ*

********

1 Test Identification Parade pertains to the field of:
A) Investigation
B) Trial
C) Satisfaction of the Investigating Officer that he is proceeding in the right direction
D) Both (a) and (b)

ಗುರುತು ಪತ್ತೆ ಕವಾಯತು ಈ ಕ್ಷೇತ್ರಕ್ಕೆ ಸಂಬಂಧಿಸಿದ್ದು:
ಎ) ತನಿಖೆ
ಬಿ) ಅಧಿವಿಚಾರಣೆ
ಸಿ) ತನಿಖಾಧಿಕಾರಿಗೆ ತಾನು ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದೇನೆಂದು ಮನವರಿಕೆಯಾದಾಗ
ಡಿ) (ಎ) ಮತ್ತು (ಬಿ) ಎರಡೂ

2 Which section of the Registration Act, 1908 deals with the effects of non-registration of documents required to be registered?
A) Section 49
B) Section 48
C) Section 47
D) None of the above.

ನೊಂದಣಿ ಕಾಯಿದೆ, 1908ರ ಯಾವ ಕಲಂ ನೊಂದಣಿ ಆಗಲೇಬೇಕಾಗಿರುವ ದಸ್ತಾವೇಜುಗಳು ನೊಂದಣಿಯಾಗದಿದಲ್ಲಿ ಆಗುವ ಪರಣಾಮಗಳ ಬಗ್ಗೆ ವ್ಯವಹರಿಸುತ್ತದೆ?
ಎ) ಕಲಂ 49
ಬಿ) ಕಲಂ 48
ಸಿ) ಕಲಂ 47
ಡಿ) ಮೇಲಿನ ಯಾವುದೂ ಅಲ್ಲ

Teachingninja.in

3 Section 27 of the Indian Evidence Act, 1872 applies ____
A) when the person giving information is an accused but not in police custody
B) when the person giving information is an accused and is in police custody
C) when the person is in police custody but not an accused
D) either (a) or (b)

ಈ ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 27 ________ ಅನ್ವಯವಾಗುತ್ತದೆ
ಎ) ಮಾಹಿತಿಯನ್ನು ಕೊಡುವ ವ್ಯಕ್ತಿಯು ಓರ್ವ ಆರೋಪಿಯಾಗಿದ್ದು ಆದರೆ ಪೋಲೀಸ್ ಅಭಿರಕ್ಷೆಯಲ್ಲಿ ಇಲ್ಲದಿರುವಾಗ
ಬಿ) ಮಾಹಿತಿಯನ್ನು ಕೊಡುವ ವ್ಯಕ್ತಿಯು ಓರ್ವ ಆರೋಪಿಯಾಗಿದ್ದು ಮತ್ತು ಪೋಲೀಸ್ ಅಭಿರಕ್ಷೆಯಲ್ಲಿ ಇರುವಾಗ
ಸಿ) ವ್ಯಕ್ತಿಯು ಪೋಲೀಸ್ ಅಭಿರಕ್ಷೆಯಲ್ಲಿ ಇದ್ದು ಆದರೆ ಆರೋಪಿಯಾಗದೆ ಇರುವಾಗ
ಡಿ) (ಎ) ಅಥವಾ (ಬಿ)

4 Which Section of the Arbitration and Conciliation Act, 1996 empowers the arbitral tribunal to rule on its jurisdiction?
A) Section 16
B) Section 17
C) Section 18
D) Section 19.

ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ಯಾವ ಕಲಂ ಮಧ್ಯಸ್ಥಿಕಾ ನ್ಯಾಯಾಧಿಕರಣಕ್ಕೆ ತನ್ನ ನ್ಯಾಯವ್ಯಾಪ್ತಿಯ ಬಗ್ಗೆ ತೀರ್ಮಾನಿಸುವ ಅಧಿಕಾರ ಕೊಡುತ್ತದೆ?
ಎ) ಕಲಂ 16
ಬಿ) ಕಲಂ 17
ಸಿ) ಕಲಂ 18
ಡಿ) ಕಲಂ 19

5 An order under Rule 5 or Rule 7 of Order XXXIII of the Code of Civil Procedure, 1908, rejecting an application for permission to sue as an indigent person is ________
A) a revisable order
B) an appealable order
C) a final order
D) none of the above

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಆದೇಶ XXXIII ನಿಯಮ 5 ಅಥವಾ ನಿಯಮ 7ರ ಅಡಿಯಲ್ಲಿ ನಿರ್ಧನಿಕನಾಗಿ ದಾವಾ ಹೂಡಲು ಪರವಾನಿಗೆ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿದ ಆದೇಶ ________
ಎ) ಪುನರೀಕ್ಷಣೆ ಮಾಡಬಹುದಾದ ಆದೇಶ
ಬಿ) ಮೇಲ್ಮನವಿ ಸಲ್ಲಿಸಬಹುದಾದ ಆದೇಶ
ಸಿ) ಅಂತಿಮ ಆದೇಶ
ಡಿ) ಮೇಲಿನ ಯಾವುದೂ ಅಲ್ಲ

Teachingninja.in

6 Section 112 of Indian Evidence Act, 1872 provides for ________
A) presumption of life
B) presumption of death
C) presumption of marriage
D) presumption of legitimacy

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 112 __________ಯನ್ನು ಒದಗಿಸುತ್ತದೆ
ಎ) ಜೀವನದ ಬಗ್ಗೆ ಪೂರ್ವಭಾವನೆ
ಬಿ) ಮರಣದ ಬಗ್ಗೆ ಪೂರ್ವಭಾವನೆ
ಸಿ) ವಿವಾಹದ ಬಗ್ಗೆ ಪೂರ್ವಭಾವನೆ
ಡಿ) ಕಾನೂನು ಸಮ್ಮತಿ ಜನನದ ಬಗ್ಗೆ ಪೂರ್ವಭಾವನೆ

7 When the judgment of a court consists of certain observations, such observations are called ____________
A) obiter dicta
B) stare decisis
C) ratio decidendi
D) None of the above

ಒಂದು ನ್ಯಾಯಾಲಯದ ತೀರ್ಪಿನಲ್ಲಿ ಕೆಲವೊಂದು ಅವಲೋಕನಗಳು ಒಳಗೊಂಡಿರುವಾಗ ಆ ಅವಲೋಕನಗಳನ್ನು ________ ಎಂದು ಕರೆಯುತ್ತಾರೆ
ಎ) ಆಬಿಟರ್ ಡಿಕ್ಟಾ
ಬಿ) ಸ್ಟೇರ್ ಡೆಸಿಸಿಸ್
ಸಿ) ರೇಷಿಯೋ ಡೆಸಿಡೆಂಡಿ
ಡಿ) ಮೇಲಿನ ಯಾವುದೂ ಅಲ್ಲ

8 Presumption under Section 113A of Indian Evidence Act, 1872 implies
A) a conclusive proof
B) court may presume
C) court shall presume
D) prosecution has to prove

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಕಲಂ 113ಎ ಅಡಿಯಲ್ಲಿನ ಪೂರ್ವಭಾವನೆ ______ ಎಂದು ಸೂಚಿಸುತ್ತದೆ
ಎ) ಸಂಪೂರ್ಣ ರುಜುವಾತು
ಬಿ) ನ್ಯಾಯಲಯವು ಪೂರ್ವಭಾವನೆ ಮಾಡಬಹುದು
ಸಿ) ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು
ಡಿ) ಅಭಿಯೋಜನೆಯು ಸಾಬೀತುಪಡಿಸಬೇಕು

9 Which Section of the Arbitration and Conciliation Act, 1996 deals with time of commencement of arbitral proceedings?
A) Section 20
B) Section 21

Teachingninja.in

C) Section 22
D) None of the above.

ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ಯಾವ ಕಲಂ ಮಧ್ಯಸ್ಥಿಕ ಪ್ರಕರಣವನ್ನು ಪ್ರಾರಂಭ ಮಾಡುವ ಸಮಯದ ಬಗ್ಗೆ ವ್ಯವಹರಿಸುತ್ತದೆ?
ಎ) ಕಲಂ 20
ಬಿ) ಕಲಂ 21
ಸಿ) ಕಲಂ 22
ಡಿ) ಮೇಲಿನ ಯಾವುದೂ ಅಲ್ಲ

10 Which of the following statement is true in the context of Section 5 of the Prevention of Corruption Act, 1988?

A) A Special Judge cannot take cognizance of offences without the accused being commited to him for trial and, in trying the accused persons, need not follow the procedure prescribed by the Code of Criminal Procedure, 1973, for the trial of warrant cases by the Magistrates.

B) A Special Judge may take cognizance of offences without the accused being commited to him for trial and, in trying the accused persons, shall follow the procedure prescribed by the Code of Criminal Procedure, 1973, for the trial of warrant cases by the Magistrates.

C) A Special Judge shall take cognizance of offences only if the accused is commited to him for trial and, in trying the accused persons, need not follow the procedure prescribed by the Code of Criminal Procedure, 1973, for the trial of warrant cases by the Magistrates.

D) None of the above

ಭ್ರಷ್ಟಾಚಾರ ನಿರ್ಮೂಲನ ಕಾಯಿದೆ, 1988ರ ಕಲಂ 5ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪೈಕಿ ಯಾವುದು ಸರಿಯಾದ ಹೇಳಿಕೆ?

ಎ) ವಿಶೇಷ ನ್ಯಾಯಾಧೀಶರು ಅಧಿವಿಚಾರಣೆಗಾಗಿ ಆರೋಪಿಯನ್ನು ತಮಗೆ ಒಪ್ಪಿಸದೆ ಆರೋಪದ ಸಂಜ್ಞೆಯನ್ನು ತೆಗೆದುಕೊಳ್ಳುವಂತಿಲ್ಲ ಮತ್ತು ಆರೋಪಿಯನ್ನು ಅಧಿವಿಚಾರಣೆ ಮಾಡುವಾಗ ಅಪರಾಧ ಪ್ರಕ್ರಿಯಾ ಸಂಹಿತೆ, 1973ರಲ್ಲಿ ವಾರಂಟ್ ಮೊಕದ್ದಮೆಯ ಅಧಿವಿಚಾರಣೆಯನ್ನು ದಂಡಾಧಿಕಾರಿಗಳು ಮಾಡುವ ಬಗ್ಗೆ ನಿಗಧಿ ಪಡಿಸಿದ ನಿಯಮಗಳನ್ನು ಪಾಲಿಸಬೇಕಾಗಿರುವುದಿಲ್ಲ.

ಬಿ) ವಿಶೇಷ ನ್ಯಾಯಾಧೀಶರು ಅಧಿವಿಚಾರಣೆಗಾಗಿ ಆರೋಪಿಯನ್ನು ತಮಗೆ ಒಪ್ಪಿಸದೆ ಆರೋಪದ ಸಂಜ್ಞೆಯನ್ನು ತೆಗೆದುಕೊಳ್ಳಬಹುದು ಮತ್ತು ಆರೋಪಿಯನ್ನು ಅಧಿವಿಚಾರಣೆ ಮಾಡುವಾಗ ಅಪರಾಧ ಪ್ರಕ್ರಿಯಾ ಸಂಹಿತೆ, 1973ರಲ್ಲಿ ವಾರಂಟ್ ಮೊಕದ್ದಮೆಯ ಅಧಿವಿಚಾರಣೆಯನ್ನು ದಂಡಾಧಿಕಾರಿಗಳು ಮಾಡುವ ಬಗ್ಗೆ ನಿಗಧಿ ಪಡಿಸಿದ ನಿಯಮಗಳನ್ನು ಪಾಲಿಸತಕ್ಕದ್ದು.

Teachingninja.in

ಸಿ) ವಿಶೇಷ ನ್ಯಾಯಾಧೀಶರು ಅಧಿವಿಚಾರಣೆಗಾಗಿ ಆರೋಪಿಯನ್ನು ತಮಗೆ ಒಪ್ಪಿಸಿದಾಗ ಮಾತ್ರ ಆರೋಪದ ಸಂಜ್ಞೆಯನ್ನು ತೆಗೆದುಕೊಳ್ಳಲೇಬೇಕು ಮತ್ತು ಆರೋಪಿಯನ್ನು ಅಧಿವಿಚಾರಣೆ ಮಾಡುವಾಗ ಅಪರಾಧ ಪ್ರಕ್ರಿಯಾ ಸಂಹಿತೆ, 1973ರಲ್ಲಿ ವಾರಂಟ್ ಮೊಕದ್ದಮೆಯ ಅಧಿವಿಚಾರಣೆಯನ್ನು ದಂಡಾಧಿಕಾರಿಗಳು ಮಾಡುವ ಬಗ್ಗೆ ನಿಗಧಿ ಪಡಿಸಿದ ನಿಯಮಗಳನ್ನು ಪಾಲಿಸಬೇಕಾಗಿರುವುದಿಲ್ಲ.

ಡಿ) ಮೇಲಿನ ಯಾವುದೂ ಅಲ್ಲ

11 Condition and Warranty are defined in the Sale of Goods Act, 1930 in ___________

A) Section 11
B) Section 12
C) Section 13
D) Section 16

ಸರಕುಗಳ ಮಾರಾಟ ಕಾಯಿದೆ, 1930ರ __________ ನಲ್ಲಿ ಷರತ್ತು ಮತ್ತು ಖಾತರಿ ಗಳನ್ನು ವಿವರಿಸಲಾಗಿದೆ.
ಎ) ಕಲಂ 11
ಬಿ) ಕಲಂ 12
ಸಿ) ಕಲಂ 13
ಡಿ) ಕಲಂ 16

12 Section 9 of the Arbitration and Conciliation Act, 1996 deals with ___________

A) Interim measures by the court
B) Setting aside of an arbitral award
C) Termination of arbitration proceeding
D) Both (a) and (b).

ಮಧ್ಯಸ್ತಿಕೆ ಮತ್ತು ಸಂಧಾನ ಅಧಿನಿಯಮ, 1996ರ ಕಲಂ 9 _______ ಬಗ್ಗೆ ವ್ಯವಹರಿಸುತ್ತದೆ
ಎ) ನ್ಯಾಯಾಲಯ ಮಾಡಬಹುದಾದ ಮಧ್ಯಂತರ ಕ್ರಮಗಳ
ಬಿ) ಮಧ್ಯಸ್ತಿಕಾ ಐತೀರ್ಪನ್ನು ರದ್ದುಗೊಳಿಸುವ
ಸಿ) ಮಧ್ಯಸ್ತಿಕಾ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವ
ಡಿ) (ಎ) ಮತ್ತು (ಬಿ) ಎರಡೂ

13 Where a case relates to two or more offences of which at least one of the offence is cognizable and other offences are non-cognizable _____

A) the case shall be deemed to be a cognizable case
B) the case shall be deemed to be a non-cognizable case
C) the case shall be deemed to be a cognizable case only if the offence is punishable with imprisonment for seven years or more
D) none of the above.

Teachingninja.in

ಎರಡು ಅಥವಾ ಹೆಚ್ಚಿನ ಆರೋಪಗಳು ಇರುವ ಒಂದು ಪ್ರಕರಣದಲ್ಲಿ ಕನಿಷ್ಠ ಒಂದು ಆರೋಪ ಸಂಜ್ಞೇಯವಾಗಿದ್ದು ಮತ್ತು ಇತರ ಆರೋಪಗಳು ಅಸಂಜ್ಞೇಯ ಆರೋಪಗಳಾಗಿದ್ದಲ್ಲಿ ______

ಎ) ಆ ಪ್ರಕರಣವನ್ನು ಸಂಜ್ಞೇಯ ಪ್ರಕರಣವೆಂದು ಪರಿಗಣಿಸತಕ್ಕದ್ದು
ಬಿ) ಆ ಪ್ರಕರಣವನ್ನು ಅಸಂಜ್ಞೇಯ ಪ್ರಕರಣವೆಂದು ಪರಿಗಣಿಸತಕ್ಕದ್ದು
ಸಿ) ಆರೋಪವು ಏಳು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಕಾರಾಗೃಹ ಶಿಕ್ಷೆಯಿಂದ ದಂಡಿತವಾಗಿದ್ದಲ್ಲಿ ಮಾತ್ರ ಆ ಪ್ರಕರಣವನ್ನು ಸಂಜ್ಞೇಯ ಪ್ರಕರಣವೆಂದು ಪರಿಗಣಿಸತಕ್ಕದ್ದು
ಡಿ) ಮೇಲಿನ ಯಾವುದೂ ಅಲ್ಲ

14 The present Attorney General of India is ______
A) Sri Mukul Rohatagi
B) Sri K.K.Venugopal
C) Sri Tushar Mehta
D) Sri G.Vahanwati

ಭಾರತದ ಈಗಿನ ಅಟಾರ್ನಿ ಜನರಲ್ ______
ಎ) ಶ್ರೀ ಮುಕುಲ್ ರೋಹಟಗಿ
ಬಿ) ಶ್ರೀ ಕೆ.ಕೆ.ವೇಣುಗೋಪಾಲ್
ಸಿ) ಶ್ರೀ ತುಷಾರ್ ಮೆಹ್ತಾ
ಡಿ) ಶ್ರೀ ಜಿ.ವಹನ್‌ವತಿ

15 Section 5 of the Limitation Act, 1963 is applicable in which of the following cases?

A) Appeals and application (other than an application for execution of decree)
B) Suits, appeals and applications (including application for execution of a decree)
C) Original cause of action
D) Suits, appeals and applications

ಕಾಲಪರಿಮಿತಿ ಅಧಿನಿಯಮ, 1963ರ ಕಲಂ 5 ಈ ಕೆಳಗಿನ ಪೈಕಿ ಯಾವ ಪ್ರಕರಣಗಳಿಗೆ ಅನ್ವಯಿಸುತ್ತದೆ?

ಎ) ಮೇಲ್ಮನವಿಗಳು ಮತ್ತು ಅರ್ಜಿಗಳು (ಡಿಕ್ರಿ ಅಮಲ್ಜಾರಿ ಅರ್ಜಿಗಳನ್ನು ಹೊರತುಪಡಿಸಿ)
ಬಿ) ದಾವಾಗಳು, ಮೇಲ್ಮನವಿಗಳು ಮತ್ತು ಅರ್ಜಿಗಳು (ಡಿಕ್ರಿ ಅಮಲ್ಜಾರಿ ಅರ್ಜಿಗಳು ಸೇರಿ)
ಸಿ) ಮೂಲ ದಾವಾ ಕಾರಣಗಳು
ಡಿ) ದಾವಾಗಳು, ಮೇಲ್ಮನವಿಗಳು ಮತ್ತು ಅರ್ಜಿಗಳು

16 Who was the Constitutional Advisor to the Constituent Assembly?
A) Dr.B.R.Ambedkar
B) Pandith Jawaharlal Nehru
C) Sri B.N.Rau
D) Dr.Rajendra Prasad.

Teachingninja.in

ಸಂವಿಧಾನ ರಚನಾ ಸಭೆಗೆ ಸಾಂವಿಧಾನಿಕ ಸಲಹೆಗಾರರಾಗಿ ಇದ್ದವರು ಯಾರು?
ಎ) ಡಾ.ಬಿ.ಆರ್.ಅಂಬೇಡ್ಕರ್
ಬಿ) ಪಂಡಿತ್ ಜವಹರಲಾಲ್ ನೆಹರು
ಸಿ) ಶ್ರೀ ಬಿ.ಎನ್.ರಾವ್
ಡಿ) ಡಾ.ರಾಜೇಂದ್ರ ಪ್ರಸಾದ್

17 Power of the manager of a joint Hindu family to alienate joint family property has been defined by the Judicial Committee of the Privy Council in:
A) Hanooman Prased v. Musummat Baboee
B) Sadhu Ram v. Bhup Singh
C) Suraj Bansi Koer v. Sheo Prased
D) Rahan Krishna Das v. Kaluram.

ಹಿಂದೂ ಅವಿಭಕ್ತ ಕುಟುಂಬದ ವ್ಯವಸ್ಥಾಪಕನಿಗೆ ಅವಿಭಕ್ತ ಕುಟುಂಬದ ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಪ್ರೀವಿ ಕೌನ್ಸಿಲಿನ ______ ಕಾನೂನು ಸಮಿತಿಯು ವಿವರಿಸಿದೆ
ಎ) ಹನುಮಾನ್ ಪ್ರಸೇದ್ ವಿರುದ್ಧ ಮುಸುಮತ್ ಬಾಬಿಯೊ
ಬಿ) ಸಾಧು ರಾಂ ವಿರುದ್ಧ ಭೂಪ್ ಸಿಂಗ್
ಸಿ) ಸೂರಜ ಬನ್ಸಿ ಕೋಯರ್ ವಿರುದ್ಧ ಶಿಯೋ ಪ್ರಸೇದ್
ಡಿ) ರಹಾನ ಕೃಷ್ಣ ದಾಸ್ ವಿರುದ್ಧ ಕಾಲುರಾಮ್

18 Which one of the following Chief Justices of India acted as a President of India?
A) Justice H.J.Kania
B) Justice P.N.Bhagawati
C) Justice M.Hidayatullah
D) Justice P.B.Gajendragadkar

ಈ ಕೆಳಗಿನ ಭಾರತದ ಮುಖ್ಯ ನ್ಯಾಯಮೂರ್ತಿಗಳ ಪೈಕಿ ಯಾರು ಭಾರತದ ಹಂಗಾಮಿ ರಾಷ್ಟ್ರಪತಿಗಳಾಗಿದ್ದರು?
ಎ) ನ್ಯಾಯಮೂರ್ತಿ ಹೆಚ್.ಜೆ.ಕನಯ್ಯಾ
ಬಿ) ನ್ಯಾಯಮೂರ್ತಿ ಪಿ.ಎನ್.ಭಗವತಿ
ಸಿ) ನ್ಯಾಯಮೂರ್ತಿ ಎಂ.ಹಿದಾಯತುಲ್ಲಾ
ಡಿ) ನ್ಯಾಯಮೂರ್ತಿ ಪಿ.ಬಿ.ಗಜೇಂದ್ರಗಡ್ಕರ್

19 Section 52 of the Transfer of Property Act, deals with transfer of property pending suit relating thereto. Which doctrine applies to the said section?
A) Pendent lite transfer
B) Sub judice transfer
C) doctrine of lis pendens
D) None of the above

Teachingninja.in

ಸ್ವತ್ತು ವರ್ಗಾವಣೆ ಅಧಿನಿಯಮದ ಕಲಂ 52 ದಾವಾ ಚಾಲ್ತಿ ಇರುವಾಗ ಅದಕ್ಕೆ ಸಂಬಂಧಪಟ್ಟಂತ ಸ್ವತ್ತುಗಳ ವರ್ಗಾವಣೆಯನ್ನು ವ್ಯವಹರಿಸುತ್ತದೆ. ಆ ಕಲಂಗೆ ಯಾವ ಸಿದ್ಧಾಂತ ಅನ್ವಯಿಸುತ್ತದೆ?
ಎ) ಪೆಂಡೆಂಟೆ ಲಿಟೆ ವರ್ಗಾವಣೆ
ಬಿ) ಸಬ್ ಜುಡೈಸ್ ವರ್ಗಾವಣೆ
ಸಿ) ಲಿಸ್ ಪೆಂಡೆನ್ಸ್ ಸಿದ್ಧಾಂತ
ಡಿ) ಮೇಲಿನ ಯಾವುದೂ ಅಲ್ಲ

20 A contract is void, if both the parties to an agreement are under a mistake ___________
A) of law
B) of fact
C) of mixed fact and law
D) none of the above.

ಒಪ್ಪಂದದ ಇಬ್ಬರು ಪಕ್ಷಗಾರರು ____________ ತಪ್ಪು ಗ್ರಹಿಕೆ ಹೊಂದಿರುವಲ್ಲಿ ಆ ಒಪ್ಪಂದವು ಶೂನ್ಯವಾಗುತ್ತದೆ.
ಎ) ಕಾನೂನಿನ ಬಗ್ಗೆ
ಬಿ) ವಿಷಯದ ಬಗ್ಗೆ
ಸಿ) ವಿಷಯ ಮತ್ತು ಕಾನೂನು ಮಿಶ್ರವಾಗಿರುವ ಬಗ್ಗೆ
ಡಿ) ಮೇಲಿನ ಯಾವುದೂ ಅಲ್ಲ

21 Under Section 14 of the Limitation Act, 1963, defect of jurisdiction must relate to______
A) Territorial jurisdiction
B) Pecuniary jurisdiction
C) Subject-matter jurisdiction
D) Either (a) or (b) or (c)

ಕಾಲಪರಿಮಿತಿ ಅಧಿನಿಯಮ, 1963ರ ಕಲಂ 14ರ ಅಡಿಯಲ್ಲಿ ಅಧಿಕಾರ ವ್ಯಾಪ್ತಿಯ ದೋಷವು ________ಗೆ ಸಂಬಂಧಿಸಿರತಕ್ಕದ್ದು
ಎ) ಪ್ರಾದೇಶಿಕ ನ್ಯಾಯವ್ಯಾಪ್ತಿ
ಬಿ) ಹಣದ ನ್ಯಾಯವ್ಯಾಪ್ತಿ
ಸಿ) ವಿಷಯದ ನ್ಯಾಯವ್ಯಾಪ್ತಿ
ಡಿ) (ಎ) ಅಥವಾ (ಬಿ) ಅಥವಾ (ಸಿ)

22 In which of the following cases has the Supreme Court ruled that the members of the transgender community who are neither male nor female, at the time of birth, are recognised as 'Third Gender' for the purpose of safeguarding and enforcing their fundamental and other legal, social and economic rights guaranteed under the Constitution?

A) Common Cause v. Union of India (W.P.(Civil) No.13 of 2003)
B) National Legal Services Authority v. Union of India, (2014) 5 SCC 438.
C) Raju Prasad Sharma v. State of Assam, (Civil Appeal No.3276 of 2013)
D) None of the above.

Teachingninja.in

ಈ ಕೆಳಗಿನ ಪೈಕಿ ಯಾವ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಜನಿಸುವ ಕಾಲಕ್ಕೆ ಪುರುಷರು ಅಥವಾ ಮಹಿಳೆಯರು ಆಗಿರದೆ ಇರುವ ಮಂಗಳಮುಖಿ ಸಮುದಾಯದ ಸದಸ್ಯರನ್ನು ಅವರ ಮೂಲಭೂತ ಮತ್ತು ಸಂವಿಧಾನದ ಅಡಿಯಲ್ಲಿ ಖಾತರಿಯಾಗಿರುವ ಇತರ ಕಾನೂನು, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳನ್ನು ಸಂರಕ್ಷಿಸಲು ಮತ್ತು ಜಾರಿಗೊಳಿಸಲು ಅವರನ್ನು 'ತೃತಿಯ ಲಿಂಗಿಗಳು' ಎಂದು ಗುರುತಿಸಿದೆ?

ಎ) ಕಾಮನ್ ಕಾಸ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ (ಡಬ್ಲ್ಯೂ.ಪಿ.(ಸಿವಿಲ್) ನಂ.13/2003)
ಬಿ) ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ವಿರುದ್ಧ ಯೂನಿಯನ್ ಆಫ್ ಇಂಡಿಯಾ, (2014) 5 ಎಸ್.ಸಿ.ಸಿ. 438.
ಸಿ) ರಾಜು ಪ್ರಸಾದ್ ಶರ್ಮ ವಿರುದ್ಧ ಅಸ್ಸಾಂ ರಾಜ್ಯ, (ಸಿವಿಲ್ ಅಪೀಲು ನಂ.3276/2013)
ಡಿ) ಮೇಲಿನ ಯಾವುದೂ ಅಲ್ಲ

23 Order XII Rule 6 of the Code of Civil Procedure, 1908 deals with ________

A) ex-parte judgment.
B) Contested judgment.
C) Judgment on admissions.
D) none of the above.

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಆದೇಶ XII ನಿಯಮ 6 ________ ಬಗ್ಗೆ ವ್ಯವಹರಿಸುತ್ತದೆ
ಎ) ಏಕಪಕ್ಷೀಯ ತೀರ್ಪು
ಬಿ) ಸ್ಪರ್ಧಾತ್ಮಕ ತೀರ್ಪು
ಸಿ) ಒಪ್ಪಿಗೆಯ ಮೇಲೆ ತೀರ್ಪು
ಡಿ) ಮೇಲಿನ ಯಾವುದೂ ಅಲ್ಲ

24 Which of the following offices is held at the pleasure of the President of India?
A) Vice-President
B) Chief Justice of India
C) Comptroller and Auditor General of India
D) Governor of a State

ಈ ಕೆಳಗಿನ ಹುದ್ದೆಗಳ ಪೈಕಿ ಯಾವುದು ಭಾರತದ ರಾಷ್ಟ್ರಪತಿಯವರ ಇಷ್ಟಪರ್ಯಂತದಲ್ಲಿ ಇರುತ್ತದೆ?
ಎ) ಉಪ-ರಾಷ್ಟ್ರಪತಿ
ಬಿ) ಭಾರತದ ಮುಖ್ಯ ನ್ಯಾಯಾಮೂರ್ತಿ
ಸಿ) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕ
ಡಿ) ರಾಜ್ಯದ ರಾಜ್ಯಪಾಲರು

25 The provisions of the Karnataka Rent Act, 1999, applies to any premises belonging to ________
A) The Wakf
B) The Muzarai or Religious or Charitable Institution
C) The State Government or the Central Government or the Local Authority
D) None of the above

Teachingninja.in

ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ನಿಭಂದನೆಗಳು ಈ ಕೆಳಗಿನವರಿಗೆ ಸೇರಿದ ಯಾವುದೇ ಕಟ್ಟಡಗಳಿಗೆ ಅನ್ವಯವಾಗುತ್ತದೆ
ಎ) ವಕ್ಫ್ ಸಂಸ್ಥೆ
ಬಿ) ಮುಜರಾಯಿ ಅಥವಾ ದಾರ್ಮಿಕ ಅಥವಾ ಸೇವಾ ಸಂಸ್ಥೆ
ಸಿ) ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆ
ಡಿ) ಮೇಲಿನ ಯಾವುದೂ ಅಲ್ಲ

26 "A person is said to have notice", of a fact when he actually knows that fact, or when, but have wilful abstention from an enquiry or search which he ought to have made, or gross negligence, he would have known it. The aforesaid statement is:
A) False
B) Partially true
C) True
D) None of the above

ಯಾವುದೇ ಸಂಗತಿಯನ್ನು ಒಬ್ಬ ವ್ಯಕ್ತಿಯು ವಸ್ತುಶ: ತಿಳಿದುಕೊಂಡಿರುವಾಗ ಅಥವಾ ತಾನು ಮಾಡ ಬೇಕಾಗಿದ್ದ ವಿಚಾರಣೆ ಅಥವಾ ಶೋಧನೆಯನ್ನು ಸ್ವಬುದ್ಧಿಯಿಂದ ಅಥವಾ ನಿರ್ಲಕ್ಷ್ಯದಿಂದ ಬಿಟ್ಟುಬಿಡದಿದ್ದಲ್ಲಿ, ಆ ಸಂಗತಿಯನ್ನು ಅವನು ತಿಳಿದುಕೊಳ್ಳಬಹುದಾಗಿದ್ದಾಗ ಆ ಸಂಗತಿಯ ಬಗ್ಗೆ ಆ "ವ್ಯಕ್ತಿಯು ನೋಟೀಸು ಪಡೆದಿದ್ದಾನೆಂದು ಹೇಳತಕ್ಕದ್ದು". ಈ ಮೇಲಿನ ಹೇಳಿಕೆಯು:
ಎ) ಸುಳ್ಳು
ಬಿ) ಭಾಗಶಃ ನಿಜ
ಸಿ) ನಿಜ
ಡಿ) ಮೇಲಿನ ಯಾವುದೂ ಅಲ್ಲ

27 Mark the correct statement(s):
A) Comptroller General of India is a Constitutional post
B) Attorney General of India holds office at the pleasure of the President
C) Governor of State holds office at the pleasure of the President
D) All of the above

ಸರಿಯಾದ ಹೇಳಿಕೆಯನ್ನು(ಗಳನ್ನು) ಗುರುತಿಸಿ:
ಎ) ಭಾರತದ ಲೆಕ್ಕ ನಿಯಂತ್ರಕ ಒಂದು ಸಂವಿಧಾನಿಕ ಹುದ್ದೆ
ಬಿ) ಭಾರತದ ಅಟಾರ್ನಿ ಜನರಲ್ ಅವರು ತಮ್ಮ ಹುದ್ದೆಯಲ್ಲಿ ರಾಷ್ಟ್ರಪತಿಯವರ ಇಷ್ಟಪರ್ಯಂತ ಇರುತ್ತಾರೆ
ಸಿ) ರಾಜ್ಯದ ರಾಜ್ಯಪಾಲರು ತಮ್ಮ ಹುದ್ದೆಯಲ್ಲಿ ರಾಷ್ಟ್ರಪತಿಯವರ ಇಷ್ಟಪರ್ಯಂತ ಇರುತ್ತಾರೆ
ಡಿ) ಮೇಲಿನ ಎಲ್ಲವೂ

28 The Rules relating to a written statement by a defendant shall apply to a written statement filed in answer to a counter claim. The said statement is ____________
A) false
B) partially true

Teachingninja.in

C) true
D) none of the above

ಪ್ರತಿವಾದಿಯ ಪ್ರತಿವಾದ ಪತ್ರಕ್ಕೆ ಸಂಬಂಧಿಸಿದ ನಿಯಮಗಳು ಎದುರು ಕ್ಲೈಮಿಗೆ ಉತ್ತರವಾಗಿ ದಾಖಲು ಮಾಡಿದ ಪ್ರತಿವಾದ ಪತ್ರಕ್ಕೆ ಅನ್ವಯಿಸತಕ್ಕದ್ದು. ಈ ಹೇಳಿಕೆಯು ______
ಎ) ಸುಳ್ಳು
ಬಿ) ಭಾಗಶಃ ನಿಜ
ಸಿ) ನಿಜ
ಡಿ) ಮೇಲಿನ ಯಾವುದೂ ಅಲ್ಲ

29 The first woman Advocate to be directly elevated as a Judge of the Supreme Court of India is ______
A) Fatima Bivi
B) Indira Jaisingh
C) Indu Malhotra
D) Ruma Pal

ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಮೂರ್ತಿಯಾಗಿ ನೇರವಾಗಿ ನೇಮಕಗೊಂಡ ಪ್ರಥಮ ಮಹಿಳಾ ನ್ಯಾಯವಾದಿ ______
ಎ) ಫಾತೀಮ ಬೀವಿ
ಬಿ) ಇಂದಿರಾ ಜೈಸಿಂಗ್
ಸಿ) ಇಂದು ಮಲ್ಹೋತ್ರ
ಡಿ) ರುಮ ಪಾಲ್

30 Delay in presenting any document for registration can be condoned up to ______
A) 1 month
B) 2 months
C) 3 months
D) 4 months

ಯಾವುದೇ ದಸ್ತಾವೇಜನ್ನು ನೊಂದಣಿಗೆ ಹಾಜರು ಪಡಿಸಲು ಆದ ಕಾಲವಿಳಂಭವನ್ನು ______ವರೆಗೆ ಮನ್ನಾ ಮಾಡಬಹುದು
ಎ) 1 ತಿಂಗಳ
ಬಿ) 2 ತಿಂಗಳ
ಸಿ) 3 ತಿಂಗಳ
ಡಿ) 4 ತಿಂಗಳ

31 Any material alteration of a negotiable instrument renders the same ______ as against any one who is a party thereto at the time of making such alteration and does not consent thereto, unless it was made in order to carry out the common intention of the original parties.
A) valid
B) voidable

Teachingninja.in

C) void
D) none of the above

ಒಂದು ವರ್ಗಾವಣೀಯ ಲಿಖಿತದಲ್ಲಿ ಮಾಡಲಾದ ಪ್ರಮುಖ ಬದಲಾವಣೆಯು, ಅಂತಹ ಬದಲಾವಣೆಯನ್ನು ಉಂಟು ಮಾಡಲಾದ ಸಮಯದಲ್ಲಿ ಇದ್ದ ಯಾವನೇ ಒಬ್ಬ ಪಕ್ಷಕಾರನ ವಿರುದ್ಧ ಆತನು ಅದಕ್ಕೆ ಸಮ್ಮತಿಸದೆ ಇರುವಾಗ, ಅಂತಹ ಬದಲಾವಣೆಯು ಮೂಲ ಪಕ್ಷಕಾರರ ಸಾಮಾನ್ಯ ಉದ್ದೇಶವನ್ನು ಜಾರಿಗೊಳಿಸುವುದಕ್ಕಾಗಿರದ ಹೊರತು, ಅದನ್ನು ________ಗೊಳಿಸುತ್ತದೆ.
ಎ) ಮಾನ್ಯ
ಬಿ) ಶೂನ್ಯಗೊಳಿಸಬಹುದಾಗಿದ್ದು
ಸಿ) ಶೂನ್ಯ
ಡಿ) ಮೇಲಿನ ಯಾವುದೂ ಅಲ್ಲ

32 'Rarest of rare case' formula was formulated in Bachan Singh v. State of Punjab and further elaborated in case of ______
A) Ranjeet Singh v. State of Rajasthan
B) Mahesh v. State of Madhya Pradesh
C) Machhi Singh v. State of Punjab
D) Bhagirath v. Delhi Administration

'ಅಪರೂಪದ ಪೈಕಿ ಅಪರೂಪ ಪ್ರಕರಣ' ಎನ್ನುವ ಸೂತ್ರವನ್ನು ಬಚ್ಚನ್ ಸಿಂಗ ವಿರುದ್ಧ ಪಂಜಾಬ್ ರಾಜ್ಯ ಪ್ರಕರಣದಲ್ಲಿ ರೂಪಿಸಲಾಗಿದ್ದು ಅದನ್ನು ________ ಪ್ರಕರಣದಲ್ಲಿ ಮತ್ತಷ್ಟು ವಿಸ್ತರಿಸಿ ಹೇಳಲಾಗಿದೆ
ಎ) ರಂಜೀತ್ ಸಿಂಗ್ ವಿರುದ್ಧ ರಾಜಸ್ಥಾನ ರಾಜ್ಯ
ಬಿ) ಮಹೇಶ್ ವಿರುದ್ಧ ಮಧ್ಯ ಪ್ರದೇಶ ರಾಜ್ಯ
ಸಿ) ಮಚ್ಚಿ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ
ಡಿ) ಭಗೀರಥ್ ವಿರುದ್ಧ ದೆಹಲಿ ಆಡಳಿತ

33 Where the mortgagor binds himself to repay the mortgage-money on a certain date, and transfers the mortgaged property absolutely to the mortgagee, but subject to a proviso that he will re-transfer it to the mortgagor upon payment as mortgage-money as agreed, the transaction is called ______________
A) english mortgage
B) mortgage by conditional sale
C) simple mortgage
D) usufructory mortgage

ನಿರ್ದಿಷ್ಟ ದಿನಾಂಕದಂದು ಅಡಮಾನಕಾರನು ಅಡಮಾನ ಹಣವನ್ನು ಮರುಸಂದಾಯ ಮಾಡಲು ತನ್ನನ್ನು ಬದ್ಧಗೊಳಿಸಿಕೊಂಡಿರುವಲ್ಲಿ ಮತ್ತು ಒಪ್ಪಂದ ಮಾಡಿಕೊಂಡಂತೆ ಆದರೆ ತಾನು ಅಡಮಾನ ಹಣವನ್ನು ಸಂದಾಯ ಮಾಡಿದ ಮೇಲೆ ಅವನು ಅಡಮಾನಕಾರನಿಗೆ ಅಡಮಾನ ಮಾಡಿದ ಸ್ವತ್ತನ್ನು ಪರಂತುಕಕೊಳಪಟ್ಟು ಅದನ್ನು ನಿರುಪಾದಿಕವಾಗಿ ಅಡಮಾನ ಪಡೆದವನಿಗೆ ವರ್ಗಾವಣೆ ಮಾಡಿದಲ್ಲಿ ಆ ವ್ಯವಹಾರವನ್ನು ________ ಕರೆಯಲಾಗುತ್ತದೆ.
ಎ) ಆಂಗ್ಲ ಅಡಮಾನ
ಬಿ) ಷರತ್ತುಪೂರ್ವಕ ಮಾರಾಟದ ಮೂಲಕ ಅಡಮಾನ

Teachingninja.in

ಸಿ) ಸರಳ ಅಡಮಾನ
ಡಿ) ಭೋಗ್ಯದ ಅಡಮಾನ

34 The essential requirements of Muslim Marriage are_______
A) ijab
B) qabul
C) either (a) or (b)
D) both (a) and (b)

ಮುಸ್ಲಿಂ ವಿವಾಹದ ಅಗತ್ಯದ ಅವಶ್ಯಕತೆಗಳೆಂದರೆ _________
ಎ) ಇಜಾಬ್
ಬಿ) ಕಬೂಲ್
ಸಿ) (ಎ) ಅಥವಾ (ಬಿ)
ಡಿ) (ಎ) ಮತ್ತು (ಬಿ) ಎರಡೂ

35 Which are the properties not liable to attachment and sale in execution of decree?
A) Bank notes, Bills of Exchange & Promissory Notes
B) All deposits and other sums in or derived from any fund to which the Public Provident Fund Act, 1968 (23 of 1968), for the time being applies.
C) A mere right to sue for damages.
D) (b) and (c)

ಡಿಕ್ರಿಯ ಅಮಲ್ಜಾರಿಯಲ್ಲಿ ಯಾವ ಸ್ವತ್ತುಗಳನ್ನು ಜಪ್ತಿ ಮಾಡಿ ಮಾರಾಟ ಮಾಡಲು ಆಗುವುದಿಲ್ಲ?
ಎ) ಬ್ಯಾಂಕ್ ನೋಟುಗಳು, ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ಪತ್ರಗಳು
ಬಿ) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, 1968 (1968ರ 23) ಇದು ತತ್ಕಾಲದಲ್ಲಿ ಅನ್ವಯಿಸುವ ಮಟ್ಟಿಗೆ ಯಾವುದೇ ನಿಧಿಯಲ್ಲಿರುವ ಅಥವಾ ಆ ನಿಧಿಯಿಂದ ಪಡೆಯಲಾದ ಎಲ್ಲಾ ಠೇವಣಿಗಳು ಮತ್ತು ಇತರ ಮೊತ್ತಗಳು.
ಸಿ) ಹಾನಿ ಪರಿಹಾರಕ್ಕಾಗಿ ದಾವೆ ಹೂಡುವ ಬರಿ ಹಕ್ಕು
ಡಿ) (ಬಿ) ಮತ್ತು (ಸಿ)

36 A member of Parliament is a "public servant" within the meaning of Section 2(c)(viii) of the Prevention of Corruption Act, 1988.
A) The aforesaid statement is false
B) The aforesaid statement is true
C) The aforesaid statement is partially true
D) None of the above

ಭ್ರಷ್ಟಚಾರ ಅಧಿನಿಯಮ, 1988ರ ಕಲಂ 2(ಸಿ)(viii)ಯಲ್ಲಿ ಅರ್ಥೈಸಿರುವಂತೆ ಓರ್ವ ಸಂಸತ್ತು ಸದಸ್ಯ "ಸಾರ್ವಜನಿಕ ನೌಕರ".
ಎ) ಈ ಮೇಲಿನ ಹೇಳಿಕೆ ಸುಳ್ಳು
ಬಿ) ಈ ಮೇಲಿನ ಹೇಳಿಕೆ ನಿಜ
ಸಿ) ಈ ಮೇಲಿನ ಹೇಳಿಕೆ ಭಾಗಶಃ ನಿಜ
ಡಿ) ಮೇಲಿನ ಯಾವುದೂ ಅಲ್ಲ

Teachingninja.in

37 Mark the incorrect statement with reference to Hindu Succession (Amendment) Act, 2005.

A) A female coparcener has been empowered to dispose of her undivided share in the Mitakshara coparcenary through a Will.
B) Four new heirs have been added in Class I of the Schedule.
C) Section 23 containing special rules relating to dwelling house has been repealed.
D) None of the above.

ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಅಧಿನಿಯಮ, 2005ಕ್ಕೆ ಸಂಬಂಧಪಟ್ಟಂತೆ ಸರಿಯಲ್ಲದ ಹೇಳಿಕೆಯನ್ನು ಗುರುತಿಸಿ.

ಎ) ಓರ್ವ ಮಹಿಳಾ ಕೋಪಾರ್ಸನರಿಗೆ ಮಿತಾಕ್ಷರ ಕೋಪಾರ್ಸನರಿಯಲ್ಲಿನ ಅವಿಭಜಿತ ಹಕ್ಕನ್ನು ಉಯಿಲು ನಾಮೆಯ ಮೂಲಕ ವಿಲೇವಾರಿ ಮಾಡಲು ಅಧಿಕಾರ ನೀಡಿದೆ.
ಬಿ) ಷೆಡ್ಯೂಲಿನ ಒಂದನೇ ವರ್ಗದಲ್ಲಿ ನಾಲ್ಕು ಹೊಸ ಉತ್ತರಾಧಿಕಾರಿಗಳನ್ನು ಸೇರಿಸಿದೆ
ಸಿ) ವಾಸದ ಮನೆಗೆ ಸಂಬಂಧಿಸಿದಂತೆ ಕಲಂ 23ರಲ್ಲಿರುವ ವಿಶೇಷ ನಿಯಮಗಳನ್ನು ರದ್ದುಗೊಳಿಸಿದೆ
ಡಿ) ಮೇಲಿನ ಯಾವುದೂ ಅಲ್ಲ

38 Period of limitation to file an application for setting aside an ex-parte decree is ________

A) 10 days
B) 30 days
C) 60 days
D) 90 days

ಏಕಪಕ್ಷೀಯ ಡಿಕ್ರಿಯನ್ನು ರದ್ದು ಪಡಿಸಲು ಅರ್ಜಿಯನ್ನು ಸಲ್ಲಿಸಲು ಇರುವ ಕಾಲಮಿತಿ ________

ಎ) 10 ದಿನಗಳು
ಬಿ) 30 ದಿನಗಳು
ಸಿ) 60 ದಿನಗಳು
ಡಿ) 90 ದಿನಗಳು

39 Under Section 11 of the Protection of Children From Sexual Offences Act, (POCSO) 2012, a person is said to commit sexual harrasment upon a child when such person with sexual intent ____________

A) makes a child exhibit his body or any part of his body so as it is seen by such person or any other person;

B) entices a child for pronographic purposes or gives gratification therefor.

C) utters any word or makes any sound, or makes any gesture or exhibits any object or part of body with the intention that such word or sound shall be heard, or such gesture or object or part of body shall be seen by the child;

D) all the above

Teachingninja.in

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ, (ಪೋಕ್ಸೋ) 2012ರ ಕಲಂ 11ರ ಅಡಿಯಲ್ಲಿ ಒಬ್ಬ ವ್ಯಕ್ತಿಯು ಮಗುವಿಗೆ ಲೈಂಗಿನ ಕಿರುಕುಳ ಕೊಟ್ಟಿದ್ದಾನೆ ಎಂದು ಪರಿಗಣಿಸಲು ಆ ವ್ಯಕ್ತಿಯು ಲೈಂಗಿಕ ಉದ್ದೇಶದಿಂದ ______

ಎ) ಒಂದು ಮಗು ತನ್ನ ದೇಹವನ್ನು ಅಥವಾ ದೇಹದ ಯಾವುದೇ ಭಾಗವನ್ನು ಪ್ರದರ್ಶಿಸಿ ಆತ ಅಥವಾ ಇತರ ಯಾವುದೇ ವ್ಯಕ್ತಿಗಳು ನೋಡುವಂತೆ ಮಾಡಿರಬೇಕು

ಬಿ) ಒಂದು ಮಗುವನ್ನು ಅಶ್ಲೀಲ ಉದ್ದೇಶಕ್ಕಾಗಿ ಪ್ರಲೋಭನೆಗೊಳಿಸುವುದು ಅಥವಾ ಅದಕ್ಕಾಗಿ ಅಕ್ರಮವಾಗಿ ಹಣವನ್ನು ನೀಡುವುದು ಮಾಡಿರಬೇಕು

ಸಿ) ಮಗುವು ಕೇಳುವಂತೆ ಅಥವಾ ನೋಡುವಂತೆ ಮಾಡುವ ಉದ್ದೇಶದಿಂದ ಯಾವುದೇ ಪದಗಳನ್ನು ಅಥವಾ ಧ್ವನಿಯನ್ನು ಉಚ್ಚರಿಸುವುದು ಅಥವಾ ಯಾವುದೇ ಸೂಚನೆಯನ್ನು ಕೊಡುವುದು ಅಥವಾ ಯಾವುದೇ ವಸ್ತುವನ್ನು ಅಥವಾ ದೇಹದ ಭಾಗವನ್ನು ಪ್ರದರ್ಶನ ಮಾಡಿರಬೇಕು

ಡಿ) ಮೇಲಿನ ಎಲ್ಲವೂ

40 A determination of lease occurs:
A) on the expiration of a notice to determine the lease, or to quit, or of intention to quit, the property leased, duly given by one party to the other.
B) by implied surrender
C) by efflux of the time limited thereby
D) all of the above

ಒಂದು ಗೇಣಿಯು ಮುಕ್ತಾಯವಾಗುವುದು:
ಎ) ಗೇಣಿಯನ್ನು ಕೊನೆಗೊಳಿಸುವುದಕ್ಕೆ ಅಥವಾ ಗೇಣಿ ಸ್ವತ್ತನ್ನು ಬಿಟ್ಟುಹೋಗಲು ಅಥವಾ ಬಿಟ್ಟು ಹೋಗುವ ಉದ್ದೇಶದಂದ ಒಬ್ಬ ಪಕ್ಷಗಾರನು ಇನ್ನೊಬ್ಬನಿಗೆ ಯುಕ್ತವಾಗಿ ಕೊಟ್ಟ ನೋಟೀಸು ಅವಧಿಯು ಮುಕ್ತಾಯವಾದ ಮೇಲೆ.
ಬಿ) ಇಂಗಿತವಾಗಿ ಬಿಟ್ಟುಕೊಡುವಿಕೆಯ ಮೂಲಕ
ಸಿ) ಈ ಮೂಲಕ ಪರಿಮಿತಗೊಳಿಸಿದ ಕಾಲವು, ಕಳೆದು ಹೋಗುವುದರ ಮೂಲಕ
ಡಿ) ಮೇಲಿನ ಎಲ್ಲವೂ

41 Under which of the following circumstances, an injunction cannot be granted?

A) to restrain any person from instituting or prosecuting any proceeding in a court not subordinate to that from which injunction is sought

B) to restrain any person from applying to any legislative body

C) to restrain any person from instituting or prosecuting any proceeding in a criminal matter

D) all of the above

Teachingninja.in

ಈ ಕೆಳಗಿನ ಪೈಕಿ ಯಾವ ಸಂದರ್ಭಗಳಲ್ಲಿ ನಿರ್ಬಂದಕಾಜ್ಞೆಯನ್ನು ಕೊಡಲು ಆಗುವುದಿಲ್ಲ?
ಎ) ಯಾವ ನ್ಯಾಯಾಲಯದಿಂದ ನಿರ್ಬಂಕಾಜ್ಞೆಯನ್ನು ಕೇಳಲಾಗುತ್ತಿದ್ದಯೊ ಅದಕ್ಕೆ ಅಧೀನವಾಗಿರದ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಯನ್ನು ಹೂಡದಂತೆ ಅಥವಾ ನಡೆಸದಂತೆ ಯಾವುದೇ ವ್ಯಕಿಯನ್ನು ಪ್ರತಿಬಂಧಿಸಲು.

ಬಿ) ಶಾಸಕಾಂಗ ಸಂಸ್ಥೆಗೆ ಅರ್ಜಿ ಸಲ್ಲಿಸದಂತೆ ಯಾವುದೇ ವ್ಯಕ್ತಿಯನ್ನು ಪ್ರತಿಬಂಧಿಸಲು

ಸಿ) ಅಪರಾಧಿಕ ವಿಷಯದಲ್ಲಿ ಯಾವುದೇ ವ್ಯವಹರಣೆಯನ್ನು ಹೂಡದಂತೆ ಅಥವಾ ನಡೆಸದಂತೆ ಯಾವುದೇ ವ್ಯಕ್ತಿಯನ್ನು ಪ್ರತಿಬಂಧಿಸಲು

ಡಿ) ಮೇಲಿನ ಎಲ್ಲವೂ

42 Leading question can be asked in ________
A) cross-examination
B) re-examination
C) examination-in-chief
D) all of above

ಉತ್ತರ ಸೂಚಕ ಪ್ರಶ್ನೆಗಳನ್ನು ________ ಕೇಳಬಹುದು
ಎ) ಪಾಟೀ ಸವಾಲಿನಲ್ಲಿ
ಬಿ) ಮರು ವಿಚಾರಣೆಯಲ್ಲಿ
ಸಿ) ಮುಖ್ಯ ವಿಚಾರಣೆಯಲ್ಲಿ
ಡಿ) ಮೇಲಿನ ಎಲ್ಲವೂ

43 The system of dual citizenship exists in which country?
A) Unites States of America
B) France
C) United Kingdom
D) None of the above

ದ್ವಿಪೌರತ್ವ ವ್ಯವಸ್ಥೆಯು ಯಾವ ದೇಶದಲ್ಲಿ ಅಸ್ತಿತ್ವದಲ್ಲಿದೆ?
ಎ) ಸಂಯುಕ್ತ ರಾಷ್ಟ್ರಗಳ ಅಮೇರಿಕ
ಬಿ) ಫ್ರಾನ್ಸ್
ಸಿ) ಯೂನೈಟೆಡ್ ಕಿಂಗ್‌ಡಂ
ಡಿ) ಮೇಲಿನ ಯಾವುದೂ ಅಲ್ಲ

44 In any case, in which a decree is passed ex-parte, against a defendant, he may ________
A) file an appeal against the said decree.
B) apply to the Court by which the decree was passed for an order to set it aside.
C) take steps as per (a) or (b).
D) file a writ petition to the High Court under Article 227 of the Constitution.

Teachingninja.in

ಯಾವುದೇ ಪ್ರಕರಣದಲ್ಲಿ ಪ್ರತಿವಾದಿಯ ವಿರುದ್ಧ ಏಕಪಕ್ಷೀಯ ಡಿಕ್ರಿಯಾದಲ್ಲಿ ಆತನು ________

ಎ) ಆ ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಬಹುದು

ಬಿ) ಡಿಕ್ರಿಯನ್ನು ಮಾಡಿದ ನ್ಯಾಯಾಲಯಕ್ಕೆ ಅದನ್ನು ತಳ್ಳಿಹಾಕಲು ಅರ್ಜಿ ಸಲ್ಲಿಸಬಹುದು

ಸಿ) (ಎ) ಅಥವಾ (ಬಿ) ಪ್ರಕಾರ ಕ್ರಮ ತೆಗೆದುಕೊಳ್ಳಬಹುದು

ಡಿ) ಸಂವಿಧಾನದ ಅನುಚ್ಛೇದ 227ರ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸಬಹುದು

45 The dissolution of Muslim Marriages Act, 1939 __________

A) enables a man married under Muslim Law, to obtain a decree for the dissolution of his marriage on certain grounds.

B) enables a man and a woman married under Muslim Law, to obtain a decree under dissolution of marriage on any one of the grounds mentioned therein.

C) enables only a woman married under Muslim Law, to obtain a decree for the dissolution of her marriage on any one or more of the grounds mentioned therein.

D) all of the above.

ಮುಸ್ಲಿಂ ವಿವಾಹ ವಿಘಟನಾ ಕಾಯಿದೆ, 1939 __________

ಎ) ಮುಸ್ಲಿಂ ಕಾಯಿದೆಯ ಅನ್ವಯ ವಿವಾಹವಾದ ಪುರುಷನಿಗೆ ಕೆಲವೊಂದು ಕಾರಣಗಳಿಂದ ಆತನಿಗೆ ವಿವಾಹ ವಿಘಟನಾ ಡಿಕ್ರಿ ಪಡೆಯಲು ಅನುವು ಮಾಡಿಕೊಡುತ್ತದೆ.

ಬಿ) ಮುಸ್ಲಿಂ ಕಾಯಿದೆಯ ಅನ್ವಯ ವಿವಾಹವಾದ ಪುರುಷ ಮತ್ತು ಮಹಿಳೆಗೆ ಅದರಲ್ಲಿ ನಮೂದಿಸಿದ ಯವುದಾದರೂ ಒಂದು ಕಾರಣದಿಂದ ಅವರಿಗೆ ವಿವಾಹ ವಿಘಟನಾ ಡಿಕ್ರಿ ಪಡೆಯಲು ಅನುವು ಮಾಡಿಕೊಡುತ್ತದೆ.

ಸಿ) ಮುಸ್ಲಿಂ ಕಾಯಿದೆಯ ಅನ್ವಯ ವಿವಾಹವಾದ ಮಹಿಳೆಗೆ ಮಾತ್ರ ಅದರಲ್ಲಿ ನಮೂದಿಸಿದ ಯಾವುದಾದರೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕಾರಣಗಳಿಂದ ಆಕೆಗೆ ವಿವಾಹ ವಿಘಟನಾ ಡಿಕ್ರಿ ಪಡೆಯಲು ಅನುವು ಮಾಡಿಕೊಡುತ್ತದೆ

ಡಿ) ಮೇಲಿನ ಎಲ್ಲವೂ

46 The maxim 'ignorantia juris non excusat' means:

A) Ignorance of law is no excuse

B) Ignorance of fact is no excuse

C) Ignorance of law is an excuse

D) Ignorance of fact is an excuse

'ಇಗ್ನೊರಾನ್‌ಶಿಯ ಜ್ಯೂರಿಸ್ ನಾನ್ ಎಕ್ಸ್‌ಕ್ಯೂಸಾಟ್' ಎನ್ನುವ ಕಾನೂನು ತತ್ವದ ಅರ್ಥ:

ಎ) ಕಾನೂನಿನ ನಿರ್ಲಕ್ಷ್ಯಕ್ಕೆ ಕ್ಷಮೆ ಇರುವುದಿಲ್ಲ

ಬಿ) ವಾಸ್ತವಿಕತೆಯ ನಿರ್ಲಕ್ಷ್ಯಕ್ಕೆ ಕ್ಷಮೆ ಇರುವುದಿಲ್ಲ

ಸಿ) ಕಾನೂನಿನ ನಿರ್ಲಕ್ಷ್ಯಕ್ಕೆ ಕ್ಷಮೆ ಇದೆ

ಡಿ) ವಾಸ್ತವಿಕತೆಯ ನಿರ್ಲಕ್ಷ್ಯಕ್ಕೆ ಕ್ಷಮೆ ಇದೆ

Teachingninja.in

47 Section 12 of the Hindu Adoptions and Maintenance Act, 1956 deals with ____________

A) effects of adoptions
B) rights of adoptive parents to dispose of their properties
C) presumptions as to the documents relating to adoptions.
D) Cancellation of adoption.

ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆ, 1956ರ ಕಲಂ 12 ________ ಬಗ್ಗೆ ವ್ಯವಹರಿಸುತ್ತದೆ
ಎ) ದತ್ತಕದ ಪರಿಣಾಮಗಳು
ಬಿ) ದತ್ತಕ ಪಡೆದ ಪೋಷಕರಿಗೆ ಅವರ ಆಸ್ತಿಗಳನ್ನು ವಿಲೇವಾರಿ ಮಾಡುವ ಹಕ್ಕು
ಸಿ) ದತ್ತಕಕ್ಕೆ ಸಂಬಂಧಪಟ್ಟ ದಾಖಲಾತಿಗಳ ಪೂರ್ವಭಾವನೆ
ಡಿ) ದತ್ತಕವನ್ನು ರದ್ದುಪಡಿಸುವುದು

48 Whoever, for the purpose of exploitation, (a) recruits, (b) transports, (c) harbours, (d) transfers, or (e) receives, a person or persons, by abuse of power, commits the offence of ___________
A) exploitation
B) extortion
C) trafficking
D) none of the above

ಯಾವುದೇ ವ್ಯಕ್ತಿಯು, ಅಧಿಕಾರನ್ನು ದುರುಪಯೋಗ ಪಡಿಸಿಕೊಂಡು ಯಾವನೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಶೋಷಿಸುವ ಸಲುವಾಗಿ (ಎ) ನೇಮಕ (ಬಿ) ಸಾಗಾಣಿಕೆ, (ಸಿ) ಆಶ್ರಯ (ಡಿ) ವರ್ಗಾವಣೆ, ಅಥವಾ (ಇ) ಸ್ವೀಕಾರ, ಮಾಡಿದಲ್ಲಿ ಆತನು ________ ಅಪರಾಧವನ್ನು ಮಾಡಿದ್ದಾನೆ
ಎ) ಶೋಷಣೆ
ಬಿ) ಬಲಾದ್ಗ್ರಹಣ
ಸಿ) ಕಳ್ಳಸಾಗಾಣೆ
ಡಿ) ಮೇಲಿನ ಯಾವುದೂ ಅಲ್ಲ

49 Whoever makes any gesture, or any preparation intending or knowing it to be likely that such gesture or preparation will cause any person present to apprehend that he who makes that gesture or preparation is about to use criminal force to that person, is said to commit __________

A) a grievous injury
B) a simple injury
C) an assault
D) None of the above

ಯಾವ ವ್ಯಕ್ತಿಯೇ ಆಗಲಿ, ಯಾವುದೇ ಸಂಜ್ಞೆಯನ್ನು ಅಥವಾ ಯಾವುದೇ ಸಿದ್ಧತೆಯನ್ನು ಅಂತಹ ಸಂಜ್ಞೆ ಮತ್ತು ಸಿದ್ಧತೆಯು ಹಾಜರಿರುವ ಯಾವನೇ ವ್ಯಕ್ತಿಗೆ, ಅಂತಹ ಸಂಜ್ಞೆ ಅಥವಾ ಸಿದ್ಧತೆ ಮಾಡುವವನು ಆ ವ್ಯಕ್ತಿಯ ಮೇಲೆ ಅಪರಾಧಿಕ ಬಲ ಪ್ರಯೋಗವನ್ನು ಪ್ರಯೋಗಿಸುವನೆಂಬ ಬೀತಿಯನ್ನುಂಟು ಮಾಡುವ ಉದ್ದೇಶದಿಂದ ಅಥವಾ

Teachingninja.in

ಹಾಗಾಗುವ ಸಂಭವವಿದೆಯೆಂದು ತಿಳಿದು ಮಾಡಿದರೆ, ಆತನು __________ ಮಾಡಿದ್ದಾನೆ ಎಂದು ಹೇಳಲಾಗುವುದು.
ಎ) ತೀವ್ರ ಗಾಯ
ಬಿ) ಸಾಮಾನ್ಯ ಗಾಯ
ಸಿ) ಹಲ್ಲೆ
ಡಿ) ಮೇಲಿನ ಯಾವುದೂ ಅಲ್ಲ

50 Which of the following is a matter outside the purview of Section 69 of the Indian Parnership Act, 1932?
A) purely personal matters between the partners
B) when one partner is a creditor of another partner or of the firm
C) a tort or tenancy action between partners
D) all of the above

ಈ ಕೆಳಗಿನ ಪೈಕಿ ಯಾವ ವಿಷಯವು ಭಾರತೀಯ ಪಾಲುದಾರಿಕ ಕಾಯಿದೆ, 1932ರ ಕಲಂ 69ರ ವ್ಯಾಪ್ತಿಯ ಹೊರಗಡೆ ಇದೆ?
ಎ) ಪಾಲುದಾರರ ನಡುವಿನ ಕೇವಲ ವ್ಯಯಕ್ತಿಕ ವಿಚಾರಗಳು
ಬಿ) ಒಬ್ಬ ಪಾಲುದಾರನು ಇನ್ನೊರ್ವ ಪಾಲುದಾರನ ಅಥವಾ ಸಂಸ್ಥೆಯ ಸಾಲಗಾರನಾಗಿರುವುದು
ಸಿ) ಪಾಲುದಾರನ ನಡುವೆ ಹಿಂಸೆ ಅಥವಾ ಹಿಡುವಳಿ ಕ್ರಮ
ಡಿ) ಮೇಲಿನ ಎಲ್ಲವೂ

51 Which of the following is not a part of the Preamble to the Constitution of India?
A) Democracy & Justice
B) Socialism & Secularism
C) Justice
D) Adult franchise

ಈ ಕೆಳಗಿನ ಪೈಕಿ ಯಾವುದು ಭಾರತೀಯ ಸಂವಿಧಾನದ ಪೀಠಿಕೆಯ ಭಾಗವಾಗಿರುವುದಿಲ್ಲ?
ಎ) ಪ್ರಜಾಪ್ರಭುತ್ವ ಮತ್ತು ನ್ಯಾಯ
ಬಿ) ಸಮಾಜವಾದ ಮತ್ತು ಜಾತ್ಯಾತೀತ
ಸಿ) ನ್ಯಾಯ
ಡಿ) ಮತದಾನ

52 Character of right sought to be declared must be ________
A) an existing right on the date of the suit or up to the date of decree
B) legal one
C) valid one
D) All the above

ವ್ಯಕ್ತಿತ್ವದ ಹಕ್ಕಿನ ಘೋಷಣೆ ಮಾಡಲು ಅದು __________
ಎ) ದಾವಾ ಸಲ್ಲಿಸುವ ದಿನದಂದು ಅಥವಾ ಡಿಕ್ರಿ ಮಾಡುವ ತಾರೀಖಿನವರೆಗೆ ಊರ್ಜಿತವಾಗಿರುವ ಹಕ್ಕು ಆಗಿರಬೇಕು
ಬಿ) ಕಾನೂನು ಬದ್ಧವಾಗಿರಬೇಕು

Teachingninja.in

ಸಿ) ಮಾನ್ಯವಾಗಿರಬೇಕು
ಡಿ) ಮೇಲಿನ ಎಲ್ಲವೂ

53 Plea of alibi' is governed by ___________ of the Indian Evidence Act, 1872
A) Section 6
B) Section 8
C) Section 11
D) Section 12

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ _________ರಲ್ಲಿ 'ಪ್ಲೀ ಆಫ್ ಅಲೀಬಿ' ಒಳಗೊಂಡಿದೆ
ಎ) ಕಲಂ 6
ಬಿ) ಕಲಂ 8
ಸಿ) ಕಲಂ 11
ಡಿ) ಕಲಂ 12

54 Under the provisions of the Karnataka Rent Act, 1999, the dispute of relationship of landlord and tenant is dealt with in___________
A) Section 45
B) Section 40
C) Section 41
D) Section 43

ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ನಿಭಂದನೆಗಳ ಅಡಿಯಲ್ಲಿ ಮಾಲಿಕ ಮತ್ತು ಬಾಡಿಗೆದಾರನ ಸಂಬಂಧದ ತಕರಾರನ್ನು ___________ ವ್ಯವಹರಿಸುತ್ತದೆ.
ಎ) ಕಲಂ 45
ಬಿ) ಕಲಂ 40
ಸಿ) ಕಲಂ 41
ಡಿ) ಕಲಂ 43

55 'A vinculo matrimonil' means:
A) effect of divorce
B) negation of second marriage
C) relation between spouse
D) from the bond of marriage

'ವಿನ್ಕುಲೊ ಮಾಟ್ರಿಮೊನಿಲ್' ಅಂದರೆ:
ಎ) ವಿಚ್ಛೇಧನದ ಪರಿಣಾಮಗಳು
ಬಿ) ಎರಡನೇ ವಿವಾಹದ ನಿರಾಕರಣೆ
ಸಿ) ಸಂಗಾತಿಗಳ ನಡುವಿನ ಸಂಬಂಧ
ಡಿ) ವಿವಾಹದ ಬಂಧದಿಂದ

56 Section 17(1)(d) of the Registration Act, 1908 applies to_______
A) A lease for any term exceeding one year
B) A lease from year to year

Teachingninja.in

C) A lease reserving yearly rent
D) All the above.

ನೊಂದಣಿ ಕಾಯಿದೆ, 1908ರ ಕಲಂ 17(1)(ಡಿ) ________ ಅನ್ವಯವಾಗುತ್ತದೆ
ಎ) ಒಂದು ವರ್ಷಕ್ಕೂ ಹೆಚ್ಚಿನ ಅವಧಿಯ ಯಾವುದೇ ಗೇಣಿಗೆ
ಬಿ) ವರ್ಷದಿಂದ ವರ್ಷಕ್ಕೆ ಇರುವ ಗೇಣಿಗೆ
ಸಿ) ವಾರ್ಷಿಕ ಬಾಡಿಗೆಯನ್ನು ನಿಗಧಿಪಡಿಸಿದ ಗೇಣಿಗೆ
ಡಿ) ಮೇಲಿನ ಎಲ್ಲವೂ

57 Who is the author of Arthashastra?
A) Vagbhata
B) Kautilya
C) Varahamihira
D) None of the above.

ಅರ್ಥಶಾಸ್ತ್ರದ ಲೇಖಕರು ಯಾರು?
ಎ) ವಾಗ್‌ಭಟ
ಬಿ) ಕೌಟಿಲ್ಯ
ಸಿ) ವರಹಾಮಿಹಿರ
ಡಿ) ಮೇಲಿನ ಯಾವುದೂ ಅಲ್ಲ

58 After the drawee of a bill has signed his assent upon the bill, or, if there are more parts thereof than one, upon one of such parts, and delivered the same, or given notice of such signing to the holder or to such person on his behalf, he is called the __________
A) payee
B) acceptor
C) indorsee
D) holder in due course

ಹಣ ಪಡೆಯುವ ವ್ಯಕ್ತಿಯು ತನ್ನ ಅಂಗೀಕಾರದ ರೂಪವಾಗಿ ಬಿಲ್ಲಿನ ಮೇಲೆ ತನ್ನ ಸಹಿಯನ್ನು ಮಾಡಿದ ನಂತರ, ಅಥವಾ ಒಂದಕ್ಕಿಂತ ಹೆಚ್ಚಿನ ಭಾಗಗಳಿದ್ದ ಮೇರೆಗೆ ಅಂತಹ ಒಂದು ಭಾಗದ ಮೇಲೆ ಮತ್ತು ಸದರಿ ಭಾಗವನ್ನು ನೀಡಿದ ಮೇರೆಗೆ ಅಥವಾ ರವಾನಿಸಿದ ಮೇರೆಗೆ, ಅದರ ಸ್ವಾಧೀನದಾರನಿಗೆ ಅಥವಾ ಆತನ ಪರವಾಗಿ ಇನ್ನ್ಯಾವನೇ ವ್ಯಕ್ತಿಗೆ ಅಂತಹ ಸಹಿಯ ಬಗ್ಗೆ ತಿಳುವಳಿಕೆ ನೀಡಿದ್ದು, ಅಂತಹ ವ್ಯಕ್ತಿಯನ್ನು _____ ಎಂದು ಕರೆಯುತ್ತಾರೆ
ಎ) ಹಣ ಪಡೆಯುವವ
ಬಿ) ಸ್ವೀಕರ್ತ
ಸಿ) ಹಿಂಬರಹಗಾರ
ಡಿ) ತತ್ಕಾಲದ ಸ್ವಾಧೀನದಾರ

59 Where in India, the first atomic power plant was set up?
A) Trombay
B) Tarapur
C) Rana Partap Sagar
D) Cochin.

Teachingninja.in

ಪ್ರಥಮ ಪರಮಾಣು ಶಕ್ತಿ ಸ್ಥಾವರ ಭಾರತದಲ್ಲಿ ಎಲ್ಲಿ ಸ್ಥಾಪನೆಯಾಗಿತ್ತು?
ಎ) ಟ್ರಾಂಬೆ
ಬಿ) ತಾರಪುರ
ಸಿ) ರಾಣಾ ಪ್ರತಾಪ್ ಸಾಗರ್
ಡಿ) ಕೊಚಿನ್

60 "Plea Bargaining" inserted in the Code of Criminal Procedure, 1973 by Criminal Law Amendment Act, 2006 incorporated in Chapter XXIA is contained in __________
A) Sections 265A to 265M
B) Sections 266A to 266L
C) Sections 265A to 265L
D) Sections 266A to 266M

ಅಪರಾಧ ಪ್ರಕ್ರಿಯಾ ಸಂಹಿತೆ, 1973ಕ್ಕೆ 2006ರ ಅಪರಾಧ ಕಾನೂನು ತಿದ್ದುಪಡಿ ಕಾಯಿದೆಯ ಮೂಲಕ XXIA ಅಧ್ಯಾಯಕ್ಕೆ ಸೇರಿಸಲಾದ 'ಆಪಾದನೆಯ ರಾಜಿ' ________ನಲ್ಲಿ ಒಳಗೊಂಡಿರುತ್ತದೆ
ಎ) ಕಲಂ 265ಎ ಇಂದ 265ಎಂ
ಬಿ) ಕಲಂ 266ಎ ಇಂದ 266ಎಲ್
ಸಿ) ಕಲಂ 265ಎ ಇಂದ 265ಎಲ್
ಡಿ) ಕಲಂ 266ಎ ಇಂದ 266ಎಂ

61 The Muslim Women (Protection of Rights on Divorce) Act, 1986 was enacted pursuant to the judgment of the Hon'ble Supreme Court in the case of ____________________
A) Ramzan Khan
B) Shah Bano Begum
C) Syed Nazamunnisa Begum
D) Fathimunissa Begum

ಮುಸ್ಲಿಂ ಮಹಿಳೆಯ (ವಿಚ್ಛೇದನದ ಮೇಲಿನ ಹಕ್ಕುಗಳ ರಕ್ಷಣೆ) ಕಾಯಿದೆ, 1986 ರಚನೆಯಾಗಿದ್ದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ __________ ಪ್ರಕರಣದ ತೀರ್ಪಿನ ಅನ್ವಯ.
ಎ) ರಮ್‌ಜಾನ್ ಖಾನ್
ಬಿ) ಷಾಹ ಬಾನು ಬೇಗಂ
ಸಿ) ಸೈಯ್ಯದ್ ನಜಮುನ್ನೀಸ ಬೇಗಂ
ಡಿ) ಫಾತೀಮುನ್ನೀಸ ಬೇಗಂ

62 Which are the offences, which were added by virtue of Act No.13/2013 w.e.f. 3.2.2013, to the Indian Penal Code?
A) voyeurism
B) sexual harassment
C) stalking
D) all the above

Teachingninja.in

ಭಾರತೀಯ ದಂಡ ಸಂಹಿತೆಗೆ ಕಾಯಿದೆ ನಂ.13/2013ರ ಮೂಲಕ ದಿನಾಂಕ 03.02.2013ರ ನಂತರ ಜಾರಿಯಾಗುವಂತೆ ಸೇರ್ಪಡೆಯಾದ ಅಪರಾಧಗಳು ಯಾವುವು?
ಎ) ಲೈಂಗಿಕ ದರ್ಶನ
ಬಿ) ಲೈಂಗಿಕ ಕಿರುಕುಳ
ಸಿ) ಹಿಂಬಾಲಿಸುವುದು
ಡಿ) ಮೇಲಿನ ಎಲ್ಲವೂ

63 The presumption as to commiting or abetting or attempting to commit certain offences, as provided under Section 29 of the Protection of Children From Sexual Offences Act, (POCSO) 2012, is in respect of the offences under following sections:
A) Sections 3, 5, 7 and 9
B) Sections 2, 4, 6 and 8
C) Sections 9, 11, 13 and 14
D) Sections 5, 7, 9 and 11

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ, (ಪೋಕ್ಸೋ) 2012ರ ಕಲಂ 29ರ ಅಡಿಯಲ್ಲಿ ಕೆಲವೊಂದು ಅಪರಾಧಗಳನ್ನು ಮಾಡಿರುವ ಬಗ್ಗೆ ಅಥವಾ ಮಾಡಲು ದುಷ್ಪ್ರೇರಿಸಿರುವ ಅಥವಾ ಮಾಡಲು ಪ್ರಯತ್ನ ಮಾಡಿರುವ ಬಗ್ಗೆ ಒದಗಿಸಿರುವ ಪೂರ್ವಭಾವನೆಯು ಈ ಕೆಳಗಿನ ಕಲಂಗಳ ಅಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದ್ದಾಗಿದೆ:
ಎ) ಕಲಂ 3, 5, 7 ಮತ್ತು 9
ಬಿ) ಕಲಂ 2, 4, 6 ಮತ್ತು 8
ಸಿ) ಕಲಂ 9, 11, 13 ಮತ್ತು 14
ಡಿ) ಕಲಂ 5, 7, 9 ಮತ್ತು 11

64 Which of the following are general exceptions under Indian Penal Code?
A) act done pursuant to the judgment or order of Court
B) act of a person of unsound mind
C) act of a Judge when acting judicially
D) all of the above

ಈ ಕೆಳಗಿನವುಗಳ ಪೈಕಿ ಯಾವುದು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿನ ಸಾಮಾನ್ಯ ಅಪವಾದಗಳಾಗಿವೆ?
ಎ) ನ್ಯಾಯಾಲಯದ ತೀರ್ಪು ಅಥವಾ ಆದೇಶದ ಅನುಸಾರವಾಗಿ ಮಾಡಿದ ಕೃತ್ಯ
ಬಿ) ಅಸ್ವಸ್ಥ ಮನಸ್ಸಿನ ವ್ಯಕ್ತಿಯ ಕೃತ್ಯ
ಸಿ) ಕಾನೂನು ಬದ್ಧತೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ನ್ಯಾಯಾಧೀಶರ ಕೃತ್ಯ
ಡಿ) ಮೇಲಿನ ಎಲ್ಲವೂ

65 The liability of a partner is _________
A) Several only
B) Joint
C) Joint as well as several
D) Strict liability

Teachingninja.in

ಓರ್ವ ಪಾಲುದಾರನ ಹೊಣೆಗಾರಿಕೆಯು ____________ ಇರುತ್ತದೆ
ಎ) ಪ್ರತ್ಯೇಕವಾಗಿ ಮಾತ್ರ
ಬಿ) ಜಂಟಿಯಾಗಿ
ಸಿ) ಜಂಟಿ ಮತ್ತು ಪ್ರತ್ಯೇಕವಾಗಿ
ಡಿ) ಕಟ್ಟುನಿಟ್ಟಾದ ಹೊಣೆಗಾರಿಕೆ

66 Who can withdraw a case from prosecution under Section 321 of the Code of Criminal Procedure, 1973?
A) the State Government
B) the Public Prosecutor in charge of a case with the permission of the Court
C) the Public Prosecutor in charge of a case with the permission of the State Government
D) none of the above.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 321ರ ಅಡಿಯಲ್ಲಿ ಒಂದು ಪ್ರಕರಣದ ಅಭಿಯೋಜನೆಯನ್ನು ಯಾರು ಹಿಂದಕ್ಕೆ ಪಡೆಯಬಹುದು?
ಎ) ರಾಜ್ಯ ಸರ್ಕಾರ
ಬಿ) ನ್ಯಾಯಾಲಯದ ಪರವಾನಿಗೆ ಪಡೆದು ಆ ಪ್ರಕರಣದ ಉಸ್ತುವಾರಿಯ ಸರ್ಕಾರಿ ಅಭಿಯೋಜಕರು
ಸಿ) ರಾಜ್ಯ ಸರ್ಕಾರದ ಪರವಾನಿಗೆ ಪಡೆದು ಆ ಪ್ರಕರಣದ ಉಸ್ತುವಾರಿಯ ಸರ್ಕಾರಿ ಅಭಿಯೋಜಕರು
ಡಿ) ಮೇಲಿನ ಯಾವುದೂ ಅಲ್ಲ

67 The maker, acceptor or indorser respectively, of a negotiable instrument is discharged from liability thereon.
A) by payment
B) by cancellation
C) by release
D) all of the above

ಒಂದು ವರ್ಗಾವಣೀಯ ಲಿಖಿತದ ಕರ್ತನು, ಅಂಗೀಕೃತನು ಅಥವಾ ಹಿಂಬರಹಗಾರನು ಅದರ ಋಣಗಳಿಂದ ____________ ವಿಮೋಚಿತನಾಗುತ್ತಾನೆ:
ಎ) ಪಾವತಿಯ ಮೂಲಕ
ಬಿ) ರದ್ದುಪಡಿಸುವಿಕೆಯ ಮೂಲಕ
ಸಿ) ಬಿಡುಗಡೆಯ ಮೂಲಕ
ಡಿ) ಮೇಲಿನ ಎಲ್ಲವೂ

68 In Muslim Law, a gift for a consideration is called________
A) Hiba-bil-iwaz
B) Ariyat
C) Sadaque
D) Hiba

Teachingninja.in

ಮುಸ್ಲಿಂ ಕಾನೂನಿನಲ್ಲಿ, ಪ್ರತಿಫಲಾಪೇಕ್ಷೆಯಿಂದ ಕೂಡಿದ ದಾನವನ್ನು __________ ಎಂದು ಕರೆಯುತ್ತಾರೆ.
ಎ) ಹಿಬಾ–ಬಿಲ್–ಇವಾಜ್
ಬಿ) ಅರಿಯತ್
ಸಿ) ಸದಾಕ್
ಡಿ) ಹಿಬಾ

69 Which is the legal doctrine applicable to Section 43 of the Transfer of Property Act, 1882?
A) ubbe remi fide
B) caveat emptor
C) feeding the grant by estoppel
D) none of the above

ಸ್ವತ್ತು ವರ್ಗಾವಣಾ ಅಧಿನಿಯಮ, 1882ರ ಕಲಂ 43ಕ್ಕೆ ಅನ್ವಯವಾಗುವ ಕಾನೂನು ಸಿದ್ಧಾಂತ ಯಾವುದು?
ಎ) ಉಬ್ಬೆ ರೆಮಿ ಫಿಡೆ
ಬಿ) ಕೇವಿಯಟ್ ಎಮ್‌ಟರ್
ಸಿ) ಫೀಡಿಂಗ್ ದಿ ಗ್ರಾಂಟ್ ಬೈ ಎಸ್ಟಾಪಲ್
ಡಿ) ಮೇಲಿನ ಯಾವುದೂ ಅಲ್ಲ

70 Order granting anticipatory bail becomes operative:
A) on passing of the order by the court
B) on arrest
C) prior to arrest
D) None of the above.

ನಿರೀಕ್ಷಣ ಜಾಮೀನು ಮಂಜೂರಾತಿ ಆದೇಶ ಜಾರಿಗೊಳ್ಳುವುದು:
ಎ) ನ್ಯಾಯಾಲಯವು ಆದೇಶವನ್ನು ಮಾಡಿದಾಗ
ಬಿ) ಬಂಧನವಾದಾಗ
ಸಿ) ಬಂಧನದ ಪೂರ್ವದಲ್ಲಿ
ಡಿ) ಮೇಲಿನ ಯಾವುದೂ ಅಲ್ಲ

71 A suit for possession of an immovable property under Section 6 of Specific Relief Act, 1963 can be filed within ____
A) 1 year of dispossession
B) 6 months of dispossession
C) 3 years of dispossession
D) 12 years of dispossession

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಕಲಂ 6ರ ಅಡಿಯಲ್ಲಿ ಸ್ಥಿರಾಸ್ತಿಯ ಸ್ವಾಧೀನಕ್ಕಾಗಿ ದಾವೆಯನ್ನು ________ ಒಳಗಡೆ ಸಲ್ಲಿಸಬಹುದು
ಎ) ಸ್ವಾಧೀನ ಕಳೆದುಕೊಂಡ ಒಂದು ವರ್ಷದ
ಬಿ) ಸ್ವಾಧೀನ ಕಳೆದುಕೊಂಡ ಆರು ತಿಂಗಳ
ಸಿ) ಸ್ವಾಧೀನ ಕಳೆದುಕೊಂಡ ಮೂರು ವರ್ಷದ
ಡಿ) ಸ್ವಾಧೀನ ಕಳೆದುಕೊಂಡ ಹನ್ನೆರಡು ವರ್ಷದ

Teachingninja.in

72 Who is known as "Father of Indian Renaissance"?
A) Lala Lajpat Rai
B) Raja Ram Mohan Roy
C) Shaheed Bhaghat Singh
D) Bala Gangadhar Tilak

ಯಾರನ್ನು 'ಆಧುನಿಕ ಭಾರತದ ಪಿತಾಮಹ' ಎನ್ನುತ್ತಾರೆ?
ಎ) ಲಾಲಾ ಲಜಪತ್ ರಾಯ್
ಬಿ) ರಾಜ ರಾಮ್ ಮೋಹನ್ ರಾಯ್
ಸಿ) ಶಹೀದ್ ಭಗತ್ ಸಿಂಗ್
ಡಿ) ಬಿ.ಜಿ.ತಿಲಕ್

73 In which of the following cases the Supreme Court of India said that 'it is not absolute rule of law that dying declaration must be corroborated by other evidence before it can be acted upon'?
A) Sharad Birdichand Sharda v. State of Maharashtra
B) Pakala Narayana Swami v. Emperor
C) Kaushal Rao v. State of Bombay
D) Harjit Kaur v. State of Punjab

ಈ ಕೆಳಗಿನ ಪೈಕಿ ಯಾವ ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಲಯವು 'ಮರಣಪೂರ್ವ ಹೇಳಿಕೆಯನ್ನು ಕಾರ್ಯಗತಗೊಳಿಸಲು ಅದಕ್ಕೆ ಸಹಾಯಕವಾಗುವ ಇತರ ಸಾಕ್ಷ್ಯಗಳು ಇರಲೇಬೇಕು ಎನ್ನುವುದು ಕಾನೂನಿನ ಸಂಪೂರ್ಣ ನಿಯಮ ಅಲ್ಲ' ಎಂದು ಹೇಳಿರುತ್ತದೆ?
ಎ) ಶರದ್ ಬೀರಚಂದ್ ಶರದ್ ವಿರುದ್ಧ ಮಹಾರಾಷ್ಟ್ರ ರಾಜ್ಯ
ಬಿ) ಪಕಾಲ ನಾರಾಯಣ್ ಸ್ವಾಮಿ ವಿರುದ್ಧ ಎಂಪರರ್
ಸಿ) ಕೌಶಲ್ ರಾವ ವಿರುದ್ಧ ಬಾಂಬೆ ರಾಜ್ಯ
ಡಿ) ಹರ್‌ಜಿತ್ ಕೌರ ವಿರುದ್ಧ ಪಂಜಾಬ್ ರಾಜ್ಯ

74 Cancellation of contract due to impossibility of performance is called ________
A) Novation
B) Rescission
C) Frustration
D) Both (b) and (c)

ಪಾಲಿಸಲು ಅಸಾಧ್ಯ ಎನ್ನುವ ಕಾರಣದಿಂದ ರದ್ದುಗೊಂಡ ಒಪ್ಪಂದವನ್ನು ________ ಎನ್ನುತ್ತಾರೆ
ಎ) ನೊವೇಶನ್
ಬಿ) ರೆಷಿಸನ್
ಸಿ) ಫ್ರಸ್ಟ್ರೇಷನ್
ಡಿ) (ಬಿ) ಮತ್ತು (ಸಿ) ಎರಡೂ

Teachingninja.in

75 If a decree is passed by the Court by way of compromise in a suit ____________

A) the same can be assailed by filing another suit on the ground that the compromise on which the decree is based was not lawful.
B) seek recall of the decree before the court which passed the decree.
C) there is no remedy in law against a compromise decree.
D) none of the above

ಒಂದು ದಾವೆಯಲ್ಲಿ ನ್ಯಾಯಾಲಯವು ರಾಜಿಯ ಮೂಲಕ ಡಿಕ್ರಿ ಮಾಡಿದಲ್ಲಿ ____________
ಎ) ಡಿಕ್ರಿ ಮಾಡಲು ಆಧಾರವಾದ ರಾಜಿಯು ಕಾನೂನುಬದ್ಧವಾಗಿ ಆಗಿಲ್ಲ ಎನ್ನುವ ಕಾರಣದಿಂದ ಬೇರೆ ಒಂದು ದಾವೆ ಸಲ್ಲಿಸಿ ಅದನ್ನು ಪ್ರಶ್ನಿಸಬಹುದು
ಬಿ) ಡಿಕ್ರಿ ಮಾಡಿದ ನ್ಯಾಯಾಲಯದ ಮುಂದೆಯೇ ಆ ಡಿಕ್ರಿಯನ್ನು ವಾಪಸ್ಸು ಪಡೆಯಲು ಕೇಳಿಕೊಳ್ಳಬಹುದು
ಸಿ) ರಾಜಿ ಡಿಕ್ರಿಯ ವಿರುದ್ಧ ಕಾನೂನಿನ ಪ್ರಕಾರ ಯಾವುದೇ ಪರಿಹಾರವಿಲ್ಲ
ಡಿ) ಮೇಲಿನ ಯಾವುದೂ ಅಲ್ಲ

76 Earnest money is the sum of money deposited for the performance of the contract. If so, which is the correct statement as under?
A) it is not a part of purchase price
B) it is given at the time of conclusion of contract
C) it can be given at any time
D) it is a guarantee of due performance of the contract

ಮುಂಗಡ ಹಣ ಎಂಬುದು ಕರಾರಿನ ಪಾಲನೆಗಾಗಿ ಜಮಾ ಮಾಡಿರುವ ಹಣದ ಮೊತ್ತ. ಹಾಗಾದರೆ, ಈ ಕೆಳಗಿನ ಪೈಕಿ ಯಾವುದು ಸರಿಯಾದ ಹೇಳಿಕೆ?
ಎ) ಅದು ಖರೀದಿ ಮೊತ್ತದ ಭಾಗವಾಗಿರುವುದಿಲ್ಲ
ಬಿ) ಅದನ್ನು ಒಪ್ಪಂದ ಮುಕ್ತಾಯವಾಗುವ ಸಮಯದಲ್ಲಿ ನೀಡಲಾಗುತ್ತದೆ
ಸಿ) ಅದನ್ನು ಯಾವುದೇ ಸಮಯದಲ್ಲಿ ನೀಡಬಹುದು
ಡಿ) ಅದು ಕರಾರಿನ ಸರಿಯಾದ ಪಾಲನೆಗೆ ನೀಡಿದ ಖಾತರಿ.

77 Who is the Chairman of the NITI Ayog?
A) Prime Minister
B) President
C) Home Minister
D) Minister of Planning

ನಿತಿ ಆಯೋಗದ ಅಧ್ಯಕ್ಷರು ಯಾರು?
ಎ) ಪ್ರಧಾನ ಮಂತ್ರಿ
ಬಿ) ರಾಷ್ಟ್ರಪತಿ
ಸಿ) ಗೃಹ ಮಂತ್ರಿ
ಡಿ) ಯೋಜನಾ ಸಚಿವರು

78 The expression "commercial quantity", in relation to narcotic drugs and psychotropic substances, means any quantity ____________ the quantity

Teachingninja.in

specified by the Central Government by notification in the Official Gazette.
A) lesser than
B) equal to
C) greater than
D) none of the above

ಮಾದಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳಿಗೆ ಸಂಬಂಧಿಸಿದಂತೆ "ವಾಣಿಜ್ಯ ಪ್ರಮಾಣ" ಎಂದರೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕೃತ ಗೆಜೆಟ್‌ನಲ್ಲಿ ನಮೂದಿಸಿದ ಪ್ರಮಾಣಕ್ಕಿಂತಲೂ ______
ಎ) ಕಡಿಮೆ ಇರುವಂತದ್ದು
ಬಿ) ಸಮಾನ ಇರುವಂತದ್ದು
ಸಿ) ಹೆಚ್ಚಿಗೆ ಇರುವಂತದ್ದು
ಡಿ) ಮೇಲಿನ ಯಾವುದೂ ಅಲ್ಲ

79 A voidable contract is one which is ______
A) not enforceable by either of the parties thereto
B) enforceable by either of the parties thereto
C) enforceable only with the permission of the court of law
D) enforceable at the option of one of the parties thereto

ಒಂದು ಶೂನ್ಯಗೊಳಿಸಬಹುದಾದ ಒಪ್ಪಂದ, ಯಾವುದೆಂದರೆ ______
ಎ) ಅದರ ಯಾವೊಬ್ಬರೆ ಪಕ್ಷಗಾರರು ಜಾರಿಗೊಳಿಸಲು ಆಗದಿರುವಂತಹದ್ದು
ಬಿ) ಅದರ ಯಾವೊಬ್ಬರು ಪಕ್ಷಗಾರರು ಜಾರಿಗೊಳಿಸಬಹುದಾಗಿದ್ದು
ಸಿ) ನ್ಯಾಯಾಲಯದಿಂದ ಪರವಾನಿಗೆ ಪಡೆದಲ್ಲಿ ಮಾತ್ರ ಜಾರಿಗೊಳಿಸಬಹುದಾಗಿದ್ದು
ಡಿ) ಪಕ್ಷಗಾರರ ಪೈಕಿ ಒಬ್ಬರು ಆಯ್ಕೆಮಾಡಿ ಜಾರಿಗೊಳಿಸಬೇಕಾಗಿದ್ದು

80 Section 12(1)(a) of Hindu Marriage Act, 1955 deals with ______
A) Impotency
B) Monogamy
C) Desertion
D) Insanity

ಹಿಂದೂ ವಿವಾಹ ಕಾಯಿದೆ, 1955ರ ಕಲಂ 12(1)(ಎ) ______ಬಗ್ಗೆ ವ್ಯವಹರಿಸುತ್ತದೆ
ಎ) ಲೈಂಗಿಕ ದುರ್ಬಲತೆ
ಬಿ) ಏಕಪತ್ನಿತ್ವ
ಸಿ) ತೊರೆಯುವುದು
ಡಿ) ಬುದ್ಧಿಭ್ರಮಣೆ

81 Wagering agreements are:
A) Void but enforceable by law
B) Void and not enforceable by law
C) Voidable and illegal
D) Voidable but legal

Teachingninja.in

ಪಂದ್ಯದ ಮೂಲಕ ಮಾಡಿಕೊಳ್ಳುವ ಒಪ್ಪಂದಗಳು:
ಎ) ಶೂನ್ಯ ಆದರೆ ಕಾನೂನು ಮೂಲಕ ಜಾರಿಗೊಳಿಸಬಹುದು
ಬಿ) ಶೂನ್ಯ ಮತ್ತು ಕಾನೂನು ಮೂಲಕ ಜಾರಿಗೊಳಿಸಲಾಗುವುದಿಲ್ಲ
ಸಿ) ಶೂನ್ಯಗೊಳಿಸಬಹುದಾಗಿದ್ದು ಮತ್ತು ಕಾನೂನು ಬಾಹಿರ
ಡಿ) ಶೂನ್ಯಗೊಳಿಸಬಹುದಾಗಿದ್ದು ಆದರೆ ಕಾನೂನು ಸಮ್ಮತ

82 According to the Constitution of India, which of the following are fundamental for the governance of the country?
A) Fundamental Rights
B) Fundamental Duties
C) Directive Principles of State Policy
D) Fundamental Rights & Fundamental Duties.

ಭಾರತದ ಸಂವಿಧಾನದ ಪ್ರಕಾರ ಈ ಕೆಳಗಿನ ಪೈಕಿ ಯಾವುದು ದೇಶದ ಆಡಳಿತಕ್ಕೆ ಪ್ರಾಮುಖ್ಯವಾಗಿರುತ್ತದೆ?
ಎ) ಮೂಲಭೂತ ಹಕ್ಕುಗಳು
ಬಿ) ಮೂಲಭೂತ ಕರ್ತವ್ಯಗಳು
ಸಿ) ರಾಜ್ಯ ನೀತಿಯ ನಿರ್ದೇಶಕ ತತ್ವಗಳು
ಡಿ) ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳು

83 The maxim 'res ipsa loquitur' is a
A) rule of evidence
B) rule of negligence
C) rule of vicarious liability
D) both (a) and (b)

'ರೆಸ್ ಇಪ್ಸಾ ಲಾಕ್ಯೂಟರ್' ಎನ್ನುವ ಕಾನೂನು ಸೂತ್ರ ________
ಎ) ಸಾಕ್ಷ್ಯದ ನಿಯಮ
ಬಿ) ನಿರ್ಲಕ್ಷ್ಯದ ನಿಯಮ
ಸಿ) ವೈಕೇರಿಯಸ್ ಹೊಣೆಗಾರಿಕೆಯ ನಿಯಮ
ಡಿ) (ಎ) ಮತ್ತು (ಬಿ) ಎರಡೂ

84 As per Article 142 of the Constitution of India the Supreme Court in the exercise of its jurisdiction may pass such decree or make such order as is necessary for doing ________ justice in any cause or matter pending before it.
A) complete
B) full
C) equal
D) inherent.

ಭಾರತ ಸಂವಿಧಾನದ ಅನುಚ್ಛೇದ 142ರ ಪ್ರಕಾರ ಸರ್ವೋಚ್ಚ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ತನ್ನ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವ್ಯಾಜ್ಯದ ಬಗ್ಗೆ ಅಥವಾ ವಿಷಯದ ಬಗ್ಗೆ ________ ನ್ಯಾಯ ದೊರಕಿಸುವುದಕ್ಕೆ ಡಿಕ್ರಿಯನ್ನು ಹೊರಡಿಸಬಹುದು.
ಎ) ಸಂಪೂರ್ಣ
ಬಿ) ಪೂರ್ತಿ

Teachingninja.in

ಸಿ) ಸಮಾನ
ಡಿ) ಅಂತರ್ನಿಹಿತ

85 Which of the following are the duties of an agent?
A) duty of reasonable care and skill
B) duty to render proper account
C) duty not to make secret profit
D) all of the above

ಈ ಕೆಳಗಿನ ಪೈಕಿ ಯಾವುದು ಏಜೆಂಟಿನ ಕರ್ತವ್ಯವಾಗಿರುತ್ತದೆ?
ಎ) ಯುಕ್ತವಾದ ಕಾಳಜಿ ಮತ್ತು ಕಾರ್ಯತತ್ಪರತೆಯ ಕರ್ತವ್ಯ
ಬಿ) ಸರಿಯಾದ ಲೆಕ್ಕಚಾರವನ್ನು ಒದಗಿಸುವ ಕರ್ತವ್ಯ
ಸಿ) ಗುಪ್ತವಾಗಿ ಯಾವುದೇ ಲಾಭ ಮಾಡದಿರುವ ಕರ್ತವ್ಯ
ಡಿ) ಮೇಲಿನ ಎಲ್ಲವೂ

86 The number of judges of a High Court is determined by ______
A) the President of India
B) the Chief Justice of India
C) the Governor of the State
D) the Parliament

ಒಂದು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಸಂಖ್ಯೆಯನ್ನು ನಿಗಧಿಪಡಿಸುವವರು ______
ಎ) ಭಾರತದ ರಾಷ್ಟ್ರಪತಿ
ಬಿ) ಭಾರತದ ಮುಖ್ಯ ನ್ಯಾಯಾಮೂರ್ತಿ
ಸಿ) ರಾಜ್ಯದ ರಾಜ್ಯಪಾಲರು
ಡಿ) ಸಂಸತ್ತು

87 What is the effect of deficit financing on economy?
A) Inflation
B) Deflation
C) Depression
D) Recession

ಹಣಕಾಸಿನ ಕೊರತೆಯಿಂದ ಆರ್ಥಿಕತೆಯ ಮೇಲೆ ಆಗುವ ಪರಿಣಾಮವೇನು?
ಎ) ಹಣದುಬ್ಬರ
ಬಿ) ಹಣದುಬ್ಬರವಿಳಿತ
ಸಿ) ಆರ್ಥಿಕ ಕುಸಿತ
ಡಿ) ಆರ್ಥಿಕ ಹಿಂಜರಿತ

88 'Compounding of offence' is defined under which section of Code of Criminal Procedure, 1973?
A) Section 315
B) Section 320

Teachingninja.in
Teachingninja.in

C) Section 321
D) Section 306

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಯಾವ ಕಲಂ 'ಅಪರಾಧಗಳ ರಾಜಿ' ಯನ್ನು ವಿವರಿಸುತ್ತದೆ?
ಎ) ಕಲಂ 315
ಬಿ) ಕಲಂ 320
ಸಿ) ಕಲಂ 321
ಡಿ) ಕಲಂ 306

89 When two persons mutually transfer the ownership of one thing for the ownership of another, neither thing or both things being money only, the transaction is called ________
A) barter
B) sale
C) an exchange
D) None of the above

ಇಬ್ಬರು ವ್ಯಕ್ತಿಗಳು ಒಂದು ವಸ್ತುವಿನ ಒಡೆತನವನ್ನು ಬೇರೊಂದು ವಸ್ತುವಿನ ಒಡೆತನಕ್ಕಾಗಿ ಪರಸ್ಪರವಾಗಿ ವರ್ಗಾಯಿಸಿಕೊಂಡಾಗ ಆ ಎರಡು ವಸ್ತುಗಳ ಪೈಕಿ ಯಾವುದೊಂದು ಹಣವಾಗಿರದೆ ಇರುವಲ್ಲಿ ಅಥವಾ ಅವೆರಡು ವಸ್ತುಗಳು ಹಣವಾಗಿರುವಲ್ಲಿ ಆ ವ್ಯವಹಾರವನ್ನು __________ ಎಂದು ಕರೆಯುತ್ತಾರೆ.
ಎ) ವಸ್ತು ವಿನಿಮಯ
ಬಿ) ಮಾರಾಟ
ಸಿ) ವಿನಿಮಯ
ಡಿ) ಮೇಲಿನ ಯಾವುದೂ ಅಲ್ಲ

90 Committal proceedings under Section 209 of Code of Criminal Procedure, 1973 are in the nature of ______________
A) investigation
B) trial
C) inquiry
D) none of the above

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 209ರ ಅಡಿಯಲ್ಲಿನ ಮೊಕದ್ದಮೆಯನ್ನು ಒಪ್ಪಿಸಿಕೊಡುವ ಕ್ರಮ ________ ಸ್ವರೂಪದಲ್ಲಿರುತ್ತದೆ
ಎ) ತನಿಖೆಯ
ಬಿ) ಅಧಿವಿಚಾರಣೆಯ
ಸಿ) ವಿಚಾರಣೆಯ
ಡಿ) ಮೇಲಿನ ಯಾವುದೂ ಅಲ್ಲ

91 The Supreme Court recognised sexual harassment at work place as a human rights violation in the case of _______
A) Vishaka v. State of Rajasthan
B) Birdichand Sharad v. State of Maharashtra

Teachingninja.in

C) Tukaram v. State of Maharashtra
D) Mohd. Ahmed Khan v. Shah Bano Begum.

ಸರ್ವೋಚ್ಚ ನ್ಯಾಯಾಲಯವು ಕೆಲಸ ಮಾಡುವ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ಮಾನವ ಹಕ್ಕುಗಳ ಉಲ್ಲಂಘನೆ ಎಂದು ______ ಪ್ರಕರಣದಲ್ಲಿ ಪರಿಗಣಿಸಿದೆ
ಎ) ವಿಶಾಖ ವಿರುದ್ಧ ರಾಜಸ್ಥಾನ ರಾಜ್ಯ
ಬಿ) ಬಿರ್ದಿಚಂದ್ ಶರದ್ ವಿರುದ್ಧ ಮಹಾರಾಷ್ಟ್ರ ರಾಜ್ಯ
ಸಿ) ತುಕಾರಾಂ ವಿರುದ್ಧ ಮಹಾರಾಷ್ಟ್ರ ರಾಜ್ಯ
ಡಿ) ಮೊಹಮದ್ ಅಹಮದ್ ಖಾನ್ ವಿರುದ್ಧ ಷಹ ಬಾನು ಬೇಗಂ

92 Examination after the cross-examination of a witness by the party who called him is called ______
A) examination-in-chief
B) re-cross-examination
C) re-examination
D) none of the above

ಸಾಕ್ಷಿಯನ್ನು ಕರೆದ ಪಕ್ಷಗಾರನು ಸಾಕ್ಷಿಯ ಪಾಟೀ ಸವಾಲು ಆದ ಬಳಿಕ ಮಾಡುವ ವಿಚಾರಣೆಯನ್ನು ______ ಎಂದು ಕರೆಯುತ್ತಾರೆ
ಎ) ಮುಖ್ಯ ವಿಚಾರಣೆ
ಬಿ) ಮರು ಪಾಟೀ ಸವಾಲು
ಸಿ) ಮರು ವಿಚಾರಣೆ
ಡಿ) ಮೇಲಿನ ಯಾವುದೂ ಅಲ್ಲ

93 Identify the correct statement in the following:

A) The court shall not take the help of the defence counsel in preparing the questions to be put under Section 313 of the Code of Criminal Procedure, 1973.

B) An accused shall not be liable to be punished if he refuses to answer any question under Section 313 of the Code of Criminal Procedure, 1973

C) Oath shall be administered to the accused when he is examined under Section 313 of the Code of Criminal Procedure, 1973

D) An accused is liable to be punished if he gives false answers to the questions put under Section 313 of the Code of Criminal Procedure, 1973.

ಈ ಕೆಳಗಿನ ಪೈಕಿ ಸರಿಯಾದ ಹೇಳಿಕೆಯನ್ನು ಗುರುತಿಸಿ.

ಎ) ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 313ರ ಅಡಿಯಲ್ಲಿ ಕೇಳಬೇಕಾಗಿರುವ ಪ್ರಶ್ನೆಗಳನ್ನು ರಚಿಸಲು ನ್ಯಾಯಾಲಯವು ಆರೋಪಿಪರ ವಕೀಲರು ಸಹಾಯವನ್ನು ಪಡೆಯಬಾರದು.

Teachingninja.in

ಬಿ) ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 313ರ ಅಡಿಯಲ್ಲಿ ಕೇಳಿದ ಯಾವುದೇ ಪ್ರಶ್ನೆಗೆ ಆರೋಪಿಯು ಉತ್ತರಿಸಲು ನಿರಾಕರಿಸಿದಲ್ಲಿ ಆತನಿಗೆ ಶಿಕ್ಷಿಸಲು ಸಾಧ್ಯವಿರುವುದಿಲ್ಲ.

ಸಿ) ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 313ರ ಅಡಿಯಲ್ಲಿ ಆರೋಪಿಯನ್ನು ವಿಚಾರಿಸುವಾಗ ಆತನಿಗೆ ಪ್ರಮಾಣ ವಚನ ಭೋದಿಸತಕ್ಕದ್ದು.

ಡಿ) ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 313ರ ಅಡಿಯಲ್ಲಿ ಕೇಳಿದ ಪ್ರಶ್ನೆಗೆ ಆರೋಪಿಯು ತಪ್ಪು ಉತ್ತರ ಕೊಟ್ಟಲ್ಲಿ ಆತನನ್ನು ಶಿಕ್ಷಿಸಬಹುದು.

94 Section 16 of the Hindu Succession Act, 1956 deals with ________
A) general rules of succession in case of female Hindu
B) Order of succession of a female Hindu
C) manner of distribution among heirs of a female Hindu
D) Both (B) and (C).

ಹಿಂದೂ ಉತ್ತರಾಧಿಕಾರ ಅಧಿನಿಯಮ, 1956ರ ಕಲಂ 16 ________ ಬಗ್ಗೆ ವ್ಯವಹರಿಸುತ್ತದೆ
ಎ) ಹಿಂದೂ ಮಹಿಳೆಯ ಉತ್ತರಾಧಿಕಾರದ ಸಾಮಾನ್ಯ ನಿಯಮಗಳು
ಬಿ) ಹಿಂದೂ ಮಹಿಳೆಯ ಉತ್ತರಾಧಿಕಾರದ ಕ್ರಮ
ಸಿ) ಹಿಂದೂ ಮಹಿಳೆಯ ವಾರಸುದಾರರುಗಳ ನಡುವೆ ಹಂಚಿಕೆಯ ವಿಧಾನ
ಡಿ) (ಬಿ) ಮತ್ತು (ಸಿ) ಎರಡೂ

95 'B' assaults 'A' using a sharp edged weapon resulting in an injury which is 6 cm long and ½ cm deep in the right forearm of 'A'. 'B' is liable to be charged for an offence punishable under __________
A) Section 323 of Indian Penal Code.
B) Section 324 of Indian Penal Code.
C) Section 325 of Indian Penal Code.
D) Section 326 of Indian Penal Code.

'ಬಿ' ಯು ಒಂದು ಹರಿತವಾದ ಅಂಚಿನ ಆಯುಧದಿಂದ 'ಎ' ಯ ಬಲ ಮುಂದೋಳಿಗೆ 6ಸೆ.ಮೀ. ಉದ್ದ ಮತ್ತು 1/2 ಸೆ.ಮೀ. ಆಳವಾದ ಗಾಯವಾಗುವಂತೆ ಹಲ್ಲೆ ಮಾಡುತ್ತಾನೆ. 'ಬಿ' ಯ ಮೇಲೆ ______ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಆರೋಪಣೆ ಮಾಡಬೇಕಾಗುತ್ತದೆ.
ಎ) ಭಾರತೀಯ ದಂಡ ಸಂಹಿತೆಯ ಕಲಂ 323
ಬಿ) ಭಾರತೀಯ ದಂಡ ಸಂಹಿತೆಯ ಕಲಂ 324
ಸಿ) ಭಾರತೀಯ ದಂಡ ಸಂಹಿತೆಯ ಕಲಂ 325
ಡಿ) ಭಾರತೀಯ ದಂಡ ಸಂಹಿತೆಯ ಕಲಂ 326

96 Section 22 of the Hindu Succession Act, 1956 provides for ____________
A) right of pre-emption among co-heirs
B) presumption in cases of simultaneous deaths
C) disqualifications of a heir
D) escheat

Teachingninja.in

ಹಿಂದೂ ಉತ್ತರಾಧಿಕಾರ ಅಧಿನಿಯಮ, 1956ರ ಕಲಂ 22 ಒದಗಿಸಿಕೊಡುವುದು ________
ಎ) ಸಹ ವಾರಸುದಾರರ ಆದ್ಯತೆಯ ಹಕ್ಕು
ಬಿ) ಏಕಕಾಲಿಕ ಮರಣದ ಸಂದರ್ಭದಲ್ಲಿನ ಪೂರ್ವಭಾವನೆ
ಸಿ) ಓರ್ವ ವಾರಸುದಾರನ ಅನರ್ಹತೆ
ಡಿ) ಎಸ್‌ಚೀಟ್

97 Which Section of the Arbitration and Conciliation Act, 1996 provides for enforcement of arbitral award?
A) Section 36
B) Section 35
C) Section 34
D) None of the above

ಮಧ್ಯಸ್ತಿಕೆ ಮತ್ತು ಸಂಧಾನ ಅಧಿನಿಯಮ, 1996ರ ಯಾವ ಕಲಂ ಮಧ್ಯಸ್ತ ಐತೀರ್ಪನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ್ದಾಗಿದೆ?
ಎ) ಕಲಂ 36
ಬಿ) ಕಲಂ 35
ಸಿ) ಕಲಂ 34
ಡಿ) ಮೇಲಿನ ಯಾವುದೂ ಅಲ್ಲ

98 The Chairman or a member of State Public Service Commission can be removed from his office by the ________
A) President of India
B) Governor of the State
C) Chairman of UPSC
D) Chief Justice of India

ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಅಥವಾ ಒಬ್ಬ ಸದಸ್ಯನನ್ನು ಆತನ ಹುದ್ದೆಯಿಂದ ________ ಪದಚ್ಯುತಿಗೊಳಿಸಬಹುದು
ಎ) ಭಾರತದ ರಾಷ್ಟ್ರಪತಿಯವರು
ಬಿ) ರಾಜ್ಯದ ರಾಜ್ಯಪಾಲರು
ಸಿ) ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು
ಡಿ) ಭಾರತದ ಮುಖ್ಯ ನ್ಯಾಯಮೂರ್ತಿಯವರು

99 Which of the following is not a ground for divorce under the Hindu Marriage Act, 1955?
A) mental disorder
B) venereal disease
C) leprocy
D) has renounced the world by entering any religious order

ಹಿಂದೂ ವಿವಾಹ ಕಾಯಿದೆ, 1955ರ ಅಡಿಯಲ್ಲಿ ಈ ಕೆಳಗಿನ ಪೈಕಿ ಯಾವುದು ವಿಚ್ಛೇದನಕ್ಕೆ ಕಾರಣವಾಗಿರುವುದಿಲ್ಲ?
ಎ) ಮಾನಸಿಕ ಅಸ್ವಸ್ಥತೆ
ಬಿ) ಗುಹ್ಯ ರೋಗ

Teachingninja.in

ಸಿ) ಕುಷ್ಠ ರೋಗ

ಡಿ) ಯಾವುದೇ ಧಾರ್ಮಿಕತೆಯನ್ನು ಪ್ರವೇಶಿಸುವ ಮೂಲಕ ಜಗತ್ತನ್ನು ತ್ಯಜಿಸಿದ್ದು

100 The delay in making an application for setting aside the arbitral award under Section 34 of the Arbitration and Conciliation Act, 1996 ________

A) can be condoned for a maximum period of 15 days

B) can be condoned for a maximum period of 30 days

C) can be condoned for a maximum period of 60 days

D) cannot be condoned except on the orders of the High Court.

ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ಕಲಂ 34ರ ಅಡಿಯಲ್ಲಿ ಮಧ್ಯಸ್ಥ ಐತೀರ್ಪನ್ನು ರದ್ದುಗೊಳಿಸಲು ಅರ್ಜಿಯನ್ನು ಸಲ್ಲಿಸಲು ಆದ ಕಾಲವಿಳಂಬವನ್ನು ________

ಎ) ಗರಿಷ್ಠ 15 ದಿನಗಳ ಅವಧಿಯವರೆಗೆ ಮನ್ನಿಸಬಹುದು

ಬಿ) ಗರಿಷ್ಠ 30 ದಿನಗಳ ಅವಧಿಯವರೆಗೆ ಮನ್ನಿಸಬಹುದು

ಸಿ) ಗರಿಷ್ಠ 60 ದಿನಗಳ ಅವಧಿಯವರೆಗೆ ಮನ್ನಿಸಬಹುದು

ಡಿ) ಉಚ್ಚ ನ್ಯಾಯಾಲಯದ ಆದೇಶವಿಲ್ಲದೆ ಮನ್ನಿಸಲಾಗುವುದಿಲ್ಲ

---------

Teachingninja.in